Clauses 1 to 6, both inclusive the Title and the Preamble were added to the Bill.

Motion to pass.

Sri B. D. JATTI.—I beg to move:

"That the Mysore Municipal Laws (Amendment) Bill, 1961 be passed."

Mr. CHAIRMAN.—The question is:

"That the Mysore Municipal Laws (Amendment) Bili, 1961 be passed."

The motion was adopted.

BUDGET ESTIMATE FOR 1961-62.

General Discussion (*contd.*)

Mr. CHAIRMAN.—General Discussion on the Budget will continue and the Hon'ble Ministers will reply now.

†Sri KADIDAL MANJAPPA (Minister for Revenue).—Mr. Speaker, Sir, I had no idea of speaking on this occasion in reply to the general discussions that have taken place. I am grateful to the Honourable Members because the working of my department has not been subjected to any criticism at the hands of Honourable Members.

Sri C. M. ARUMUGHAM.—Famine was referred to.

Sri KADIDAL MANJAPPA.—I have followed the debate. My friend Sri Mohsin made an observation which necessitated my intervention. He said while discussing the Budget that when both of us were returning from Chintamani the driver of the lorry in which we were travelling was tipping the Police Constable at every Station. It is true that myself and Sri Mohsin went to Chintamani last year in connection with a by-election. We were invited there to participate in the election campaign. We returned from that place and at about 1 or 1-30 A.M. the taxi in which we were coming broke down near the Hoskote tank.

5-00 P.M.

So, we were stranded there. After waiting for 15 or 20 minutes, a lorry arrived and we requested the driver to take us to Bangalore. Hon'ble Members are perhaps aware that between Hoskote and Bangalore there is only one Police Station and it is situated at Krishnarajapuram. It it true that the lorry was stopped in 2 or 3 places ; once it was to fill water and next time near a village because somebody wanted the driver to carry a bundle in the lorry. The lorry was loaded with vegetables and there was no need for the driver to tip any Constable. My friend Mr. Mohsin was snoring all the time. (*laughter*). I was also sleepy, but I did not actually sleep. I do not know what prompted him to take it that the driver tipped the police. I was sitting by the side of the driver and I did not see him tipping anybody.

Sri G. VENKATAI GOWDA.—Probably, he was dreaming about it.

Sri M. C. NARASIMHAN.—Is it by accident that Mr. Mohsin is not present here just at present ? (*laughter*)

Sri F. H MOHSIN.—I am here. (*laughter*)

(Sri MOHSIN *was sitting in the back rows*)

Sri J. B. MALLARADHYA.—You are not in your seat.

Sri N. O. Samaji. (Marathi)

Sri H. V. KOUJALGI.—The Member wants to know whether the driver knew that you were a Minister when you travelled in the lorry?

Sri KADIDAL MANJAPPA.—Yes, he knew that I was a Minister and I was stranded there. Sir, neither the driver nor the conductor paid anything to the constable there. Perhaps, one circumstance must have induced Mr. Mohsin, to infer that the driver had given tip to the Constable. In Krishnarajapuram or Shoolay Police Station, the driver stopped the vehicle and went to the Police Station; I do not know for what purpose he went there. But, we cannot infer that he went there to pay something to the police. So, Sir, it is wrong to take it that illegal gratification was paid to the police.

Sri Y. VEERAPPA.—What action do you propose to take against the Member who has made this incorrect statement on the floor of the House?

Sri KADIDAL MANJAPPA.—He might have said it in a lighter vein. (*laughter*)

Sri V. SRINIVASA SHETTY.—Sir, the Hon'ble Minister says, he has not seen the driver giving anything to the police. He may only say that he did not see ; he cannot say that the driver did not pay.

Sri KADIDAL MANJAPPA.—I have stated that there is only one police station between Hoskote and Bangalore, whereas the Hon'ble Member said that the driver was tipping the police throughout.

Sri C. J. MUCKANNAPPA.—Sir, the Hon'ble Minister says one thing and the Hon'ble Member, Mr. Mohsin says just the opposite thing. Whom should we believe Sir ?

Sri KADIDAL MANJAPPA.—Sir, this is God's truth. It is unnecessary to carry on the discussion on what I said and what Mr. Mohsin said. (*laughter*)

Sri Devaraj Urs referred to the grant of land to the landless people including to the Scheduled Castes. He has questioned why Government should not treat the Scheduled Castes as landless people as is done in the case of the Tibetan refugees. Sir, with regard to Scheduled Castes people, there is a centrally sponsored scheme of colonisation. In accordance with the scheme, about 82 such colonies have been started throughout the State. Some members, have questioned the propriety to levy surcharge and my friend the Finance Minister will deal with that point.

†Sri B. VAIKUNTA BALIGA.—Sir, my friend Mr. Narasimhan referred to the reorganisation in the Labour Department and my friend Sri Subramanya answered him sufficiently, but I would like to add a few words by way of giving a few facts and figures.

The Department was reorganised with a view to obtain uniformity throughout the State and to secure efficiency and effective implementation of the several labour laws. Under the old set up, there was one class I and 15 class II officers. Now, there are 9 class I posts and 10 class II posts. The State has been divided into 4 Divisions, each in charge of class I officer. The four Divisions have been further divided into 10 sub-divisions each under the charge of one II class officer. This is done to guarantee speedy remedy. It may be mentioned that the department has been reorganised very recently and any repurcussions with regard to that are being received and watched. Having given it a fair trial, my friend will have the opportunity to suggest remedy, when it will be examined. It will be too early to put forth objections. He can afford to wait. That is all I have got to say with regard to Mr. Narasimhan's point.

ಶ್ರೀ ವೀರೇಂದ್ರ ಪಾಟೀಲ್ (ಅಬ್ಕಾರಿ ನಚಿವರು).—ಮಾನ್ಯ ಸಭಾಧ್ಯಕ್ಷರೇ ಈಗ ತಾನೆ ನಮ್ಮ ಮಾನ್ಯ ಸ್ನೇಹಿತರಾದ ಕಂದಾಯದ ಮಂತ್ರಿಗಳು ತಮ್ಮ ಖಾತೆಯ ಬಗೆ ಸ್ವಲ್ಪವನ್ನೇ ಹೇಳಿ ಮುಗಿಸಿಬಿಟ್ಟರು. ಆದರೆ ನನ್ನ ಪಾಲಿಗೆ ಬಂದಿರತಕ್ಕ ಪಾನನಿರೋಧ ಖಾತೆಯ ಬಗ್ಗೆ ಮಾನ್ಯ ನದಸ್ಯರುಗಳಲ್ಲಿ ಕೆಲವರು ಬಹಳ ಕಟುವಾಗಿ, ತೀವ್ರವಾಗಿ ಟೀಕೆಮಾಡಿದ್ದಾರೆ. ಅದರ ನಲುವಾಗಿ ನಾನೀಗ ಸ್ವಲ್ಪಹೊತ್ತು ನಿಧಾನವಾದರೂ ಚಿಂತೆಯಿಲ್ಲ, ಈ ಪಾನ ನಿರೋಧಾಚರಣೆಯ ಬಗ್ಗೆ ನಮ್ಮ ನರ್ಕಾರದ ನೀತಿ. ಥೋರಣೆಗಳೇನಿರುತ್ತವೆಂಬುದನ್ನು ನವಿನಾರವಾಗಿ ಈಗ ಈ ನಭೆಯ ಮುಂದಿಡಬೇಕೆಂದು ಇಚ್ಛಿಸಿದ್ದೇನೆ.

ಈ ದಿವನ ಪಾನನಿರೋಧವು ನಮ್ಮ ರಾಜ್ಯಾಂದ್ಯಂತವೂ ಅಚರಣೆಗೆ ಬಂದಿಲ್ಲ. ಹೀಗಿರುವಾಗ ಕೆಲವು ಮಾನ್ಯ ನದನ್ಯರು ಈ ಪಾನನಿರೋಧಾಚರಣೆಯನ್ನು ಯಶಶ್ವಿಯಾಗಿ ಈಗ ಜಾರಿಯಲ್ಲಿರತಕ್ಕ ಪ್ರದೇಶದಲ್ಲಾದರೂ ಜಯಪ್ರದಗೊಳಿನಲು ಅಡಳಿತಪಕ್ಷದವರಿಗೆ ನಾಧ್ಯವಾಗದಿರುವುದರಿಂದ ಈ ಪಾನನಿರೋಧಾಚರಣೆಯನ್ನೇ ನ್ಕಾಪ್‌ಮಾಡಿಬಿಡಿ ಎನ್ನುವ ಅರ್ಥಬರುವ ರೀತಿಯಲ್ಲಿ ಕೆಲವರು ಮಾತನಾಡಿದ್ದಾರೆ. ಆದರೆ ಈಗ ನಾನು ಒಂದು ಅಂಶವನ್ನಿಲ್ಲಿ ಸ್ಪಷ್ಟಪಡಿನಬೇಕಾಗಿದೆ. ಈ ನಭೆಯಲ್ಲಿರತಕ್ಕ ಕೆಲವು ಮಾನ್ಯ ನದನ್ಯರು ಮೈನೂರು ಕಾಂಗ್ರೆನ್ ಪ್ರದೇಶ ಅಧ್ಯಕ್ಷರು ಈ ಪಾನನಿರೋಧಾಚರಣೆಯ ವಿಚಾರವಾಗಿ ಹೇಳಿಕೆ ಕೊಟ್ಟಿರುವುದನ್ನು ಇವರು ಸ್ವಲ್ಪ ತಪ್ಪುಅರ್ಥದಲ್ಲಿ ತಿಳಿದುಕೊಂಡಿದ್ದಾನೆಂದು ಕಂಡುಬರುತ್ತಿದೆ. ಆದರೆ ಕೆಲವು ಮಾನ್ಯ ನದನ್ಯರು ಇದನ್ನು scrap ಮಾಡಿ ಅಂತ ಹೇಳಿದ್ದಾರೆ. ಆದರೆ ಅವರನ್ನು ಹಾಗೆ ಹೇಳಬೇಡಿ ಎಂತ ಯಾರಿಂದಲೂ ಅಡ್ಡಿಪಡಿನಲಿಕ್ಕಾಗುವುದಿಲ್ಲ. ಆದರೆ ಕೆಲವು ಮಾನ್ಯ ನದನ ರು ಹಾಗೆ scrap ಮಾಡಿ ಎಂತ ಹೇಳಿದುದಕ್ಕೆ ಕಾರಣಗಳೇನೆಂದರೆ–ಈಗ ಈ ಪಾನನಿರೋಧಾ ಪದ್ಧತಿಯನ್ನು ರಾಜ್ಯಾದ್ಯಂತವೂ ಜಾರಿಗೆ ತಂದಿಲ್ಲವೆಂದೂ, ಹಾಲಿ ಪ್ರೊಹಿಬಿಷನ್ ಜಾರಿಯಲ್ಲಿರತಕ್ಕ ಕಡೆ ಇದು ಅಷ್ಟು ನರಿಯಾಗಿ ಕೆಲನ ಮಾಡುತ್ತಿಲ್ಲವೆಂದೂ, ಈ ಪಾನನಿರೋಧವನ್ನು ಎಫೆಕ್ಟಿವ್ ಆಗಿ ಜಾರಿಗೆ ತರಲು ಅಡಳಿತವರ್ಗಕ್ಕೆ ಚೈತನ್ಯವಿಲ್ಲವೆಂದೂ ಹೇಳುತಾ ಇದನ್ನು Scarp ಮಾಡುವುದೇ ಲೇಸೆಂದು ಹೇಳಿದ್ದಾರೆ. ಆದರೆ ಅವರು ಹೀಗೆಲ್ಲಾ ವಾದ ಮಾಡಿದ್ದರೂ ಕೂಡ ದೇಶದಲ್ಲಿರತಕ್ಕ ಜನರಿಗೆ ನರಾಗವಾಗಿ ಪಾನಮಾಡಿನಿ ಅವರಿಂದ ಎಷ್ಟು ದುಡ್ಡು ನಾಧ್ಯವಾಗುತ್ತದೋ ಅಷ್ಟನ್ನೂ ವನೂಲ್ಮಾಡಿಕೊಳ್ಳಿ ಎಂಬ ಅಭಿಪ್ರಾಯದಿಂದ ಆ ಮಾನ್ಯ ನದನ್ಯರು ಇದನ್ನು scrap ಮಾಡಿ ಎಂತ ಹೇಳಿದ್ದಾರೆಂದು ನಾನು ಭಾವಿನರಾರೆ.

(ಶ್ರೀ ವೀರೇಂದ್ರ ಪಾಟೀಲ್)

ಆದರೆ ನಮಗೆ ಈ ಪಾನನಿರೋಧ ನೀತಿಯಲ್ಲಿ ಸಂಪೂರ್ಣ ನಂಬಿಕೆಯಿದೆ; ವಿಶ್ವಾಸವಿದೆ. ಆದರೆ ಈ ದಿವಸ ನಾನೇನೋ ಈ ಖಾತೆಗೆ ಅಧ್ಯಕ್ಷನಾಗಿರಬಹುದು. ಆದರೆ ಇಲ್ಲಿಯವರೆಗೂ ನನಗೆ ಈ ಮದ್ಯ, ಸಾರಾಯಿ, ಜಿನ್, ಬ್ರಾಂದಿ, ಬೀರ್ ವಿಸ್ಕಿ-ರಂ, ಇತ್ಯಾದಿಗಳೇನು ಎಂಬುದೇ ಗೊತ್ತಿಲ್ಲ. ನಾನು ಇವುಗಳೊಂದನ್ನೂ ನೋಡಿಲ್ಲ. ಇನ್ನು ಮೇಲೆ ಇವುಗಳೆಲ್ಲ ಏನಿದೆ ಎಂಬುದನ್ನು ತಿಳಿದು ಕೊಳ್ಳಬೇಕಾಗಿರುತ್ತೆ. ಈ ಅಸೆಂಬ್ಲಿ ಮುಗಿಯುವುದರೊಳಗೇ ಇವುಗಳ ವಿಚಾರವನ್ನು ಸ್ವಲ್ಪ ಮಟ್ಟಿಗೆ ತಿಳಿದುಕೊಳ್ಳಬೇಕೆಂದಿರುತ್ತೇನೆ. ಅಂದರೆ ಇವುಗಳನ್ನು ಕುಡಿದು ತಿಳಿದುಕೊಳ್ಳುತ್ತೆನೆಂದಲ್ಲ! ಆದರೆ ಈ ವಿಚಾರದಲ್ಲಿ ನಾನು ತಮ್ಮೆಲ್ಲರಲ್ಲೂ ಅರಿಕೆ ಮಾಡಿಕೊಳ್ಳುವುದೇನೆಂದರೆ ಇದನ್ನು ನಾವು ಅಷ್ಟುರಾಘವಾಗಿ ಚರ್ಚೆಮಾಡತಕ್ಕ ವಿಷಯವಲ್ಲ ಇದು. ನಾವು ಈ ಪ್ರೊಹಿಬಿಷನ್ ಪಾಲಸಿಯನ್ನು ದೇಶದಲ್ಲಿ ಕ್ರಮಕ್ರಮವಾಗಿ ಮುಂದುವರಿಸಿಕೊಂಡು ಹೋಗಲೇಬೇಕು. ನಾವು ಮಹಾತ್ಮಾ ಗಾಂಧಿಯವರ ಅನುಯಾಯಿಗಳು. ಆದಕಾರಣ ಆ ಮಹಾತ್ಮಾಗಾಂಧಿಯವರೇನು ಈ ಪಾನನಿರೊಧದ ಬಗ್ಗೆ ಹೇಳಿದ್ದಾರೋ ಅದನ್ನು ನಾವು ಚಾಚೂ ತಪ್ಪದೆ ಆಚರಣೆಯಲ್ಲಿ ತರುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ. ಮಹಾತ್ಮಾಗಾಂಧಿಜಿಯವರು ಭರತಖಂಡದಲ್ಲಿ ಮತ್ತೆ ರಾಮರಾಜ್ಯವನ್ನು ಜಾರಿಗೆ ತರಬೇಕೆಂದು ಹೇಳಿದ್ದರು. ಅದನ್ನು ನಾವು ಈಗಾಗಲೇ ಜಾರಿಗೆ ತಂದಿದ್ದೇವೆ. ಮಹಾತ್ಮಾ ಗಾಂಧಿಜಿಯವರು ಏನು ಹೇಳುತ್ತಿದ್ದರೆಂದರೆ, ಈ ಪಾನನಿರೋಧದ ವಿಚಾರದಲ್ಲಿ "ನಾನು ಇಂಡಿಯದೇಶಕ್ಕೆ ಒಂದು ಗಂಟೆಕಾಲವಾದರೂ ಸಾರ್ವಭೌಮನೆನಿಸಿಕೊಳ್ಳುವ ಪದವಿ ದೊರತರೆ ನಾನು ಮೊಟ್ಟಮೊದ ನೆಯದಾಗಿ ಈ ಇಡಿ ಇಂಡಿಯಾ ದೇಶದಲ್ಲಿ ಜಾರಿಗೆ ತರುವಂಥ ಮೊದಲನೆ ವಿಷಯವೇನೆಂದರೆ ದೇಶದಲ್ಲಿ ಈ ಹೆಂಡಂಗಡಿಗಳೇನಿರುತ್ತವೆ, ಅವುಗಳನ್ನೆಲ್ಲ ಮೊದಲು ಮುಚ್ಚಿಸಿಬಿಡುತ್ತೇನೆ" ಎಂದು ಅನ್ನುತ್ತಿದ್ದರು. ನಾವು ಈ ದಿವಸ ಅವರ ಅನುಯಾಯಿಗಳಾಗಿರುವುದರಿಂದ ಅವರು ಹೇಳಿದ ಮಾರ್ಗವನ್ನೇ ಅನುಸರಿಸಿಕೊಂಡು ಹೋಗುತ್ತಿದ್ದೇವೆ. ಆದರೆ ಇಲ್ಲಿಯತನಕ ಈ ಮಾನ್ಯ ಸಭೆಯಲ್ಲಿ ಈ ಪಾನನಿರೋಧಾಚರಣೆಯ ಬಗ್ಗೆ ಏನೇನು ಟೀಕೆ ಬಂದಿವೆ ಮತ್ತು ಯಾರ್ಯಾರು ಏನೇನು ಉತ್ತಮ ಸಲಹೆಗಳನ್ನು ಮಂಡಿಸಿರುತ್ತಾರೆ ಅವರುಗಳಿಗೆಲ್ಲರಿಗೂ ನಾನು ತುಂಬಾ ಆಭಾರಿಯಾಗಿದ್ದೇನೆ; ಅವರಿಗೆಲ್ಲ ನಾನು ಚಿರಋಣಿ. ಅನೇಕ ಮಾನ್ಯ ಸದಸ್ಯರು ಅನೇಕ ರಚನಾತ್ಮಕವಾದ ಸಲಹೆಗಳನ್ನಿತ್ತಿದ್ದಾರೆ. ಆ ಸಲಹೆಗಳ ಪ್ರಕಾರ ನಾವು ಈ ಪಾಲಸಿಯನ್ನು ಜಾರಿಗೆ ತರಲು ಪ್ರಯತ್ನ ಸರ್ವಪ್ರಯತ್ನಗಳನ್ನು ನಡೆಸುತ್ತೇವೆ. ಆದರೆ ಇದರ ವಿಚಾರದಲ್ಲಿ ಯಾರಿಗಾದರೂ ವಿಶ್ವಾಸವಿಲ್ಲವೆಂದು ಹೇಳುವುದಾದರೆ ಅಂಥವರಿಗೆ ಮಹಾತ್ಮಾಗಾಂಧಿಯವರ ವಿಷಯದಲ್ಲಿ ವಿಶ್ವಾಸವಿಲ್ಲವೆಂದೇ ಹೇಳಬೇಕಾಗುತ್ತದೆ. ಆದರೆ ಇಲ್ಲಿಯವರೆಗೂ ಜಾರಿಗೆ ತಂದಿರತಕ್ಕ ಪಾನನಿರೋಧದ ಆಚರಣೆ ದೇಶದಲ್ಲಿ ಜಯಪ್ರದವನ್ನು ಗಳಿಸಿರುತ್ತದೆಯೇ ಅಥವಾ ಇಲ್ಲವೇ ಎಂಬ ವಿಚಾರವು ಚರ್ಚಾಸ್ಪದವಾದುದಾಗಿದೆ. ಆದರೆ ನಾನೀಗ ತಮ್ಮೆಲ್ಲರಲ್ಲೂ ಅರಿಕೆಮಾಡಿಕೊಳ್ಳುವುದೇನೆಂದರೆ ಯಾರಾದರೂ ಈ ಪ್ರೊಹಿಬಿಷನ್ ಪ್ರಪಂಚದಲ್ಲಿ ಜಯಪ್ರದವನ್ನು ಗಳಿಸಿರುತ್ತೆಯೇ ಎಂತ ಕೇಳುವ ಪ್ರಶ್ನೆಗೆ ನನ್ನ ಒಂದೇ ಒಂದು ಉತ್ತರವೇನೆಂದರೆ ಇಡಿ ಜಗತ್ತಿನಲ್ಲೆಲ್ಲೂ ಇದು ಜಯಪ್ರದವಾಗದಿದ್ದರೂ ಈ ಪ್ರೊಹಿಬಿಷನ್ ನಮ್ಮ ಇಂಡಿಯಾ ದೇಶದಲ್ಲಿ ಮಾತ್ರ ಜಯಪ್ರದವಾಗೇ ಆಗುತ್ತೆಂದು ನಾನು ಧೃಢವಾಗಿ ಹೇಳಬಲ್ಲೆ. ಈ ಹಿಂದೆ ಯಾರಾದರೂ ಈ ಪಾನನಿರೋಧದ ಕಾಯಿದೆ ಜಗತ್ತಿನಲ್ಲಿ ಜಯಪ್ರದವಾಗಿತ್ತೆಂದರೆ ಅದು ಈ ಇಂಡಿಯಾದೇಶ ಒಂದರಲ್ಲಿ ಮಾತ್ರವೇ ಎಂದು ನಾನು ಭಾವಿಸುತ್ತೇನೆ. ಇದಕ್ಕೆ ಕಾರಣವೇನೆಂದರೆ ನಮ್ಮ ಭರತಖಂಡದಲ್ಲಿ ಭಾರತೀಯ ಸಂಸ್ಕೃತಿ ಏನಿರುತ್ತೋ ಅದರ ಪರಿಣಾಮವಾಗಿ ಈ ದಿವಸ ನಮ್ಮ ಹಿಂದೂ ಸಮಾಜದಲ್ಲಿ ಯಾರು ಈ ಕುಡಿತವನ್ನು ಕೈಬಿಟ್ಟಿದ್ದಾರೋ ಅಂಥವರೂ ಸಮಾಜದಲ್ಲಿ ಒಂದು ಉನ್ನತ ಸ್ಥಾನ ಪಡೆದುಕೊಂಡಿರತಕ್ಕವರಾಗಿದ್ದಾರೆ. ಹಾಗೊಂದು ವೇಳೆ ಕೆಲವರಲ್ಲಿ ಏನು ಈ ಕುಡಿತದ ಅಭ್ಯಾಸವಿರುವುದೋ ಅಂಥವರೂ ಕೂಡ ಈ ದಿವಸ ಸಾರ್ವಜನಿಕ ಸ್ಥಳ

ಗಳಲ್ಲಿ ಕುಳಿತು ಬಹಿರಂಗವಾಗಿ ಈ ಕುಡಿಯುವ ಧೈರ್ಯವನ್ನು ಅವರು ಮಾಡುವಹಾಗಿಲ್ಲ. ಇದು ನಮ್ಮ ಸಮಾಜದ ಒಂದು ವಿಶೇಷ. ಇಂಥ ಒಂದು ಒಳ್ಳೆಯ ವಾತಾವರಣ ನಮ್ಮ ದೇಶದಲ್ಲಿದೆ. ಹೀಗಿದ್ದರೂ ಇಲ್ಲಿಯ ತನಕ ನಮ್ಮ ದೇಶದಲ್ಲಿ ಈ ಪಾನನಿರೋಧಾಚರಣೆಯ ಶಾಸನಕ್ಕೆ ಒಂದು ಬೆಂಬಲ ಹಾಗೂ ಮಾನ್ಯತೆ ದೊರೆಯದಿದ್ದರೆ ಅದು ನಮ್ಮ ದೇಶದ ಒಂದು ದೊಡ್ಡ ದೌರ್ಭಾಗ್ಯವಲ್ಲದೆ ಮತ್ತೇನಿಲ್ಲ! ಇನ್ನೂ 8-10 ವರ್ಷಗಳ ಕಾಲದಲ್ಲಾದರೂ ಈ ಕುಡಿತವನ್ನು ದೇಶದಲ್ಲಿ ಸಂಪೂರ್ಣವಾಗಿ ನಿಲ್ಲಿಸುವಂತೆ ಮಾಡಲು ಏನೇನು ಯೋಜನೆಗಳನ್ನು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನೆಲ್ಲ ನಾವೂ ನೀವೂ ಕೂಡಿ ವಿಚಾರವಿಮರ್ಶೆ ಮಾಡೋಣ. ಆದರೆ ಈ ದಿವಸ ಈ ಪಾನನಿರೋಧ ನೀತಿಯು ಸಲುವಾಗಿ ಸರ್ಕಾರದವರ ಧೋರಣೆಯಾದರೂ ಏನಿದೆಯೆಂದರೆ–" ಗೋ-ಸ್ಲೋ-ಕಾಲಸಿ " ಪ್ರಕಾರ ಇದನ್ನು ತಡೆಗಟ್ಟಬೇಕೆಂಬುದೇ ಆಗಿದೆ. ಆದರೆ ಕೆಲವರು ದೇಶಾದ್ಯಂತವೂ ಒಮ್ಮೆಲೇ ಇದನ್ನೇಕೆ ಜಾರಿಗೆ ತರಬಾದೆಂದು ಕೇಳುತ್ತಿದ್ದಾರೆ. ಅದರೆ ಅದು ನಮ್ಮ ಪಾಲಿಸಿಯಲ್ಲ. ನಾವು ಈಗಾಗಲೇ ಈ ವಿಚಾರದಲ್ಲಿ ಒಂದು ಫೇಸ್ಡ್ ಪ್ರೋಗ್ರಾಂ ಎಂತ ಮಾಡಿಕೊಂಡಿದ್ದೇವೆ. ಆ ಪ್ರಕಾರ ನಾವೀಗ ಇದನ್ನು ಒಂದು ಸ್ಟೇಜ್-ಬೈ-ಸ್ಟೇಜ್ ಮುಂದುವರಿಸಿಕೊಂಡು ಹೋಗುತ್ತಿದ್ದೇವೆಂದು ನಾನೀಗ ತಿಳಿಸುತ್ತಿದ್ದೇನೆ. ನನ್ನ ಸಹೋದ್ಯೋಗಿಗಳಾಗಿರತಕ್ಕ ಶ್ರೀ ಎಚ್. ರಾಚಯ್ಯನವರು ಈ ಹಿಂದೆಯೇ ಈ ಪಾನನಿರೋಧವನ್ನು ಜಾರಿಗೆ ತರುವ ವಿಷಯದಲ್ಲಿ ಇನ್ನು ಕೇವಲ ನಾಲ್ಕೇ ವರ್ಷಗಳಲ್ಲಿ ಇದನ್ನು ಇಡೀ ರಾಜ್ಯದಲ್ಲಿ ಸಂಪೂರ್ಣವಾಗಿ ಜಾರಿಗೆ ತರಲಾಗುವುದೆಂದು ಅವರು ಈ ಸರ್ಕಾರದ ನೀತಿಯನ್ನೂ ಧೋರಣೆಯನ್ನೂ ತಿಳಿಸಿದ್ದಾರೆ ನಾವು ಈ ಪಾನನಿರೋಧಾಚರಣೆಯ ಶಾಸನವನ್ನು ತಾ. 1-1-1947ರಿಂದ ಜಾರಿಗೆ ತಂದಿದ್ದೇವೆ ಆಗಿನಿಂದಲೂ ಕ್ರಮಕ್ರಮವಾಗಿ ಒಂದೊಂದು ಜಿಲ್ಲೆಗೂ ಈ ನೀತಿಯನ್ನು ಅಳವಡಿಸಿಕೊಂಡು ಬರುರತ್ತಿರುವಾಗಿದೆ. 1954 ರಲ್ಲಿ ಹಾಸನ ಜಿಲ್ಲೆಯಲ್ಲೂ ಮತ್ತು ಬೀದರ್ ಜಿಲ್ಲೆಯಲ್ಲೂ ಈ ಶಾಸನವನ್ನು ಜಾರಿಗೆ ತರಲಾಗಿದೆ. 1960 ರಲ್ಲಿ ಮೈಸೂರು ಜಿಲ್ಲೆಯಲ್ಲಿ ಮೈಸೂರು ಸಿಟಿ ಮತ್ತು ಮೈಸೂರು ತಾಲ್ಲೂಕ್ ಏನಾ ಉಳಿದೆಲ್ಲಾ ಭಾಗದಲ್ಲೂ ಪಾನನಿರೋಧ ಶಾಸನವು ಜಾರಿಯಲ್ಲಿರುತ್ತೆ. ಇನ್ನು 1961ರಲ್ಲಿ ಮೈಸೂರು ಜಿಲ್ಲೆಯಲ್ಲಿ ಕ್ಯಬಟ್ಟಿದ್ದ ಮೈಸೂರು ಸಿಟಿ ಮತ್ತು ಮೈಸೂರು ತಾಲ್ಲೂಕ್‌ಗಳಲ್ಲೂ ಮತ್ತು ಮಂಡ್ಯ ಜಿಲ್ಲೆಯಲ್ಲೂ ಈ ಕಾಯಿದೆಯನ್ನು ಜಾರಿಗೆ ತರಬೇಕೆಂದು ನಿರ್ಣಯ ಮಾಡಿದ್ದೇವೆ. ಇದು 1-7-1961 ರಿಂದ ಅಲ್ಲಿ ಜಾರಿಗೆ ಬರಲಿದೆ. ಈವರೆಗಾಗಲೇ ನಾವು ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಶೇ 75 ರಷ್ಟು ಪ್ರದೇಶದಲ್ಲಿ ಈ ಪಾನನಿರೋಧ ಶಾಸನವು ಜಾರೀಲಿರುತ್ತೆ. ಆದರೆ ಅಲ್ಲಿ ಇನ್ನು ಕೆಲವು ಪರಿಯೊಗಳಲ್ಲಿ ಮಾತ್ರ ಇಲ್ಲ. ಇನ್ನುಳಿದ ಮೂರು ಜಿಲ್ಲೆಗಳಲ್ಲಿ, ಎರಡು ಜಿಲ್ಲೆಗಳಲ್ಲಿ ಈಗಾಗಲೇ ಇದನ್ನು ಪೂರ್ಣವಾಗಿ ಜಾರಿಗೆ ತರಲಾಗಿದೆ. ಈ ಪೈಕಿ ಬೆಂಗಳೂರು ಜಿಲ್ಲೆಯಲ್ಲಿ ಬೆಂಗಳೂರು ಸಿಟಿ ಮತ್ತು 2 ತಾಲ್ಲೂಕುಗಳಲ್ಲನ್ನೂ ಜಾರಿಗೆ ಬಂದಿಲ್ಲ. ಇಲ್ಲಿಯೂ ಮತ್ತು ರಾಯಚೂರು— ಕಲ್ಲುಬುರ್ಗಿ, ಈ ಸ್ಥಳಗಳಲ್ಲಿ ಕೂಡ ಇನ್ನೂ ಒಂದು ವರ್ಷದಲ್ಲಿ ಇದನ್ನು ಜಾರಿಗೆ ತರಬೇಕೆಂದು ಧೋರಣೆಯನ್ನಿಟ್ಟುಕೊಂಡಿರುತ್ತೇವೆ. ಇನ್ನು ಎರಡು ವರ್ಷದೊಳಗೆ ಈ ಸ್ಥಳಗಳಲ್ಲಿ ಸಂಪೂರ್ಣವಾಗಿ ಜಾರಿಗೆ ತರಬೇಕೆಂಬ ಧೋರಣೆಯನ್ನು ಮಾಡಿದ್ದೇವೆ. ಅಲ್ಲಿಗೆ ಇನ್ನು ನಮ್ಮ ರಾಜ್ಯದಲ್ಲಿ ಮೂರು ಜಿಲ್ಲೆಗಳು ಮಾತ್ರ ಉಳಿಯುತ್ತವೆ.

ಇಡೀ ದೇಶದಲ್ಲಿ 109 ಜಿಲ್ಲೆಗಳಲ್ಲಿ ಪಾನನಿರೋಧ ಜಾರಿಗೆ ಬಂದಿದೆ. ಇನ್ನೂ 2/3 ಭಾಗ ಪ್ರದೇಶದಲ್ಲಿ ಪಾನನಿರೋಧ ಜಾರಿಗೆ ಬಂದಿಲ್ಲ. ಬಿಹಾರ್, ಪಶ್ಚಿಮ ಬಂಗಾಳ, ರಾಜಾಸ್ಥಾನ, ಕಾಶ್ಮೀರ್—ಈ ರಾಜ್ಯಗಳಲ್ಲಿ ಒಂದು ಇಂಚು ಪ್ರದೇಶ ಡ್ರೈ ಇಲ್ಲ. ಇದನ್ನು ನೋಡಿದರೆ ನಾವು ಯಾವ ವೇಗದಲ್ಲಿ ಮುಂದಕ್ಕೆ ಹೋಗಿ ಪ್ರಗತಿ ಸಾಧಿಸುತ್ತಿದ್ದೇವೆ ಎಂಬುದನ್ನು ಯೋಚನೆ ಮಾಡಬೇಕು. ಕೇರಳ ರಾಜ್ಯದಲ್ಲಿ ಅರ್ಧಭಾಗ wet area ಇದೆ. ಆಂಧ್ರದಲ್ಲಿ ಇಪ್ಪತ್ತು ಜಿಲ್ಲೆಗಳು wet area ಆಗಿದೆ. ಆದ್ದರಿಂದ ನಾವು ಯಾವ ವೇಗದಲ್ಲಿ ಹೋಗುತಾ, ಇದ್ದೇವೆ ಎಂಬುದನ್ನು ನೋಡಬೇಕು. ಈಗ ಮೂರು ಜಿಲ್ಲೆಗಳು ಮಾತ್ರ ಉಳಿ

(ಶ್ರೀ ವೀರೇಂದ್ರ ಪಾಟೀಲ್)

ದಿವೆ. ನಾವು ತೀವ್ರಗತಿಯಲ್ಲಿ ಮುಂದುವರೆಯುತ್ತಿದ್ದೇವೆ. ಒಂದು ದಿವಸದಲ್ಲಿ ಸಂಪೂರ್ಣ ಪಾನನಿರೋಧ ಎರಾ ಪ್ರದೇಶದಲ್ಲಿಯೂ ಜಾರಿಗೆ ತರುವುದು ಸಾಧ್ಯವಿಲ್ಲ. ಅನೇಕ ಸದಸ್ಯರು ಮಾತನಾಡುತಾ ಇದು utter failure ಆಗಿದೆ ಎಂದು ಹೇಳಿದರು. ಆದರೆ utter failure ಎಂದು ಹೇಳುವುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ಆದರೆ ಪಾನನಿರೋಧ ನೀತಿ ಅಷ್ಟು ಜಯಪ್ರದ ಮಟ್ಟದಲ್ಲಿ ಸಾಗಿಲ್ಲ ಎಂಬುದನ್ನು ಮಾತ್ರ ಹೇಳಬಹುದು. ಕ್ಷಯವರೆಗೆ ಮಾಡಿರುವ ಕಾರ್ಯ ನೋಡಿದರೆ ನಮಗೆ ಹೆಚ್ಚಿನ ಜಯ ದೊರೆತಿದೆ ಎಂದು ಅನ್ನಬಹುದು. ಅದರಲ್ಲಿಯೂ ವಿಶೇಷವಾಗಿ ಬೈಲು ಪ್ರದೇಶದಲ್ಲಿ ಹೆಚ್ಚಿನ ಜಯ ಸಿಕ್ಕಿದೆ. ಬಡ ಕುಟುಂಬದಲ್ಲಿ ದುಡಿಮೆಯ ಸಂಪಾದನೆ ಹೆಂಡಕ್ಕೆ ಹೋಗುತಾ ಇದ್ದಿತು. ಈಗ ಇಂಥ ಜನರು ಕುಡಿಯುವುದನ್ನು ಬಿಟ್ಟಿದ್ದಾರೆ. ಎಲ್ಲರೂ ಕುಡಿಯುತಾರೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಮಲೆನಾಡು ಪ್ರದೇಶದಲ್ಲಿ ಮಾತ್ರ ಅಷ್ಟು ಜಯ ಸಿಕ್ಕಿಲ್ಲ. ಈ ಪ್ರದೇಶದಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರಿಕೆ ಎಲ್ಲಿ ನಡೆಯುತ್ತಿದೆ ಎಂಬುದನ್ನು ಕಂಡುಹಿಡಿಯುವುದು ಬಹಳ ಕಷ್ಟವಾಗಿದೆ. ಈ ಪ್ರದೇಶದಲ್ಲಿ ಮಾತ್ರ ಹೆಚ್ಚಿನ ಪ್ರಮಾಣದಲ್ಲಿ ಜಯ ಸಿಕ್ಕಿಲ್ಲ. ಎಂದು ಇಷ್ಟು ಹೇಳಬಲ್ಲೆ.

ಈ ಸಂದರ್ಭದಲ್ಲಿ ಪಾನನಿರೋಧದ ಬಗ್ಗೆ ಇರತಕ್ಕ ಅಂಕಿ ಅಂಶಗಳನ್ನು ಕೊಡುತ್ತೇನೆ. ಇದರಿಂದ ಈ ಪಾನನಿರೋಧ ನೀತಿಯು ಯಶಸ್ವಿಯಾಗಿದೆಯೇ ಇಲ್ಲವೇ ಎಂಬುದು ಎಲ್ಲರಿಗೂ ಗೊತಾಗುತ್ತದೆ.

* * *

	Prohibition cases filed	Fines recovered.
1958	71,662	Rs. 6,00,095
1959	64,469	Rs. 6,70,701
1960	77,208	Rs. 6,97,371

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಇನ್ನು ಎಷ್ಟು ಕೇಸಸ್ ಸಿಕ್ಕದೇ ಹೋಗಿರಬಹದು ಎನ್ನುವುದನ್ನು ಹೇಳುತ್ತೀರಾ ?

Mr. CHAIRMAN.—If Hon'ble Members want to put any question by way of clarification, they may do so when the reply is over. What I would suggest is not to Interfere when the Minister is replying.

Sri M. C. NARASIMHAN.—This is social legislation.

ಶ್ರೀ ವೀರೇಂದ್ರ ಪಾಟೀಲ್.—ಅದನ್ನು ಹೇಳುತ್ತೇನೆ. ಪೋಲಸ್ ಅಧಿಕಾರಿಗಳು ಹೆಚ್ಚು ಜಾಗ್ರತೆ ವಹಿಸಿ ಅನೇಕ ಕೇಸುಗಳನ್ನು ಹಾಕಿದ್ದಾರೆ. ಅವರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆ. ಪೋಲೀಸ್ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಈಗ ಪಾನನಿರೋಧ ಶಾಸನ ಸರಿಯಾಗಿ ಜಾರಿಗೆ ಬಂದಿಲ್ಲವೆಂದು ಅನೇಕ ಸದಸ್ಯರು ಹೇಳಿದ್ದಾರೆ. ಆದರೆ ಅದಕ್ಕೆ ಮೂಲಕಾರಣ ಏನು ಎಂಬುದನ್ನು ಪೊದಲು ಎಲ್ಲರೂ ತಿಳಿದುಕೊಳ್ಳಬೇಕಾಗಿದೆ. ಪೊದಲನೇ ಕಾರಣ ಏನೆ ದರ ಅನೇಕರು loose talk ಮಾತನಾಡುತಾರೆ. Prohibition failure ಆಗಿದೆ ಎಂದು ಹೇಳುತ್ತಲೇ ಇರುತಾರೆ. ಅಂಥವರಿಗೆ ನಿಜವಾಗಿಯೂ ವಾಸ್ತವಾಂಶ ಏನಿದೆ ಎಂಬುದೂ ಗೊತ್ತಿರುವುದಿಲ್ಲ. ಇಂಥ loose talk ನಿಂದ ವಿಷಪೂರ್ಣ ವಾತಾವರಣ ಕಲ್ಪಿಸಲ್ಪಡುತ್ತದೆ. ಯಾವದೊಂದು ಕಾನೂನು ಸರಿಯಾಗಿ ಆಚರಣೆಗೆ ಬರಬೇಕಾದರೆ ಆದು ಅಧಿಕಾರಿಗಳ ಮೇಲೆ ಅಷ್ಟೇ ಅವಲಂಬಿಸಿರುವುದಿಲ್ಲ. ಅದಕ್ಕೆ ಜನತೆಯೂ ಸಹ ಸಹಕರಿಸಬೇಕಾಗುತ್ತದೆ. ಈ ಅಂಶವನ್ನು ವಿಚಾರ ಮಾಡತಕ್ಕದ್ದು ಅವಶ್ಯವಾಗಿದೆ. ಪಾನನಿರೋಧ ಸರಿಯಾಗಿ

ಜಾರಿಗೆ ಬಂದಿಲ್ಲ, ಅದು ಅಯಶಸ್ವಿಯಾಗಿದೆ, ಅದನ್ನು ತೆಗೆದುಹಾಕಬಿಡಿ ಎಂದು ನಾವೇ ಹೇಳುತ್ತ ಹೋಗುವುದು ಸರಿಯಲ್ಲ. ಸ್ಕ್ರಾಪ್ ಮಾಡಿ ಎಂದು ಹೇಳತಕ್ಕದ್ದು ಸರಿಯಲ್ಲ. ಕಾನೂನು ಇದ್ದರೂ ಸಹ ಅಪರಾಧಗಳು ಆಗುತ್ತಲೇ ಇರುತ್ತವೆ. ಕ್ರಿಮಿನಲ್ ಪ್ರೊಸೀಜರ್ ಕೋಡ್ ಇದೆಯೆಂದು ಮರ್ಡರ್ ಆಗುವುದು ನಿಂತಿದೆಯೇ? ಇದೊಂದು ಸಮಾಜ ಸುಧಾರಣೆಯ ಕಾನೂನು ಆಗಿದೆ. ಇಂಥಾದ್ದಕ್ಕೆ ಜನತೆಯೂ ಸಹ ಸಹಕರಿಸಬೇಕಾಗುತ್ತದೆ. ಇದನ್ನು ಯಶಸ್ವಿಯಾಗಿ ಮಾಡುವುದಕ್ಕೆ ಸರ್ಕಾರದ ಆಡಳಿತ ಯಂತ್ರದ ಜವಾಬ್ದಾರಿ ಎಷ್ಟಿದೆಯೋ ಅಷ್ಟೇ ಜವಾಬ್ದಾರಿ ಸಮಾಜದ ಮೇಲೂ ಇದೆ. ಉನ್ನತ ಸ್ಥಾನದಲ್ಲಿರತಕ್ಕಂಥ ಈ ಸಭೆಯ ಸದಸ್ಯರು ಜವಾಬ್ದಾರಿಯಿಲ್ಲದೆ ಪಾನನಿರೋಧ ಅಯಶಸ್ವಿಯಾಗಿದೆ ಎಂದು ಹೇಳತಕ್ಕ ಮಾತು ಸರಿಯಾದದ್ದಲ್ಲ. ಇದನ್ನು ಯಶಸ್ವಿಯಾಗಿ ಮಾಡಲು ಅದರ ಜವಾಬ್ದಾರಿ ನಿಮ್ಮ ಮೇಲೆ ಹೆಚ್ಚಾಗಿದೆ. ನೀವೆಲ್ಲರೂ ಸಂಪೂರ್ಣವಾಗಿ ಸಹಕರಿಸಿ ಇದನ್ನು ಯಶಸ್ವಿಯಾಗಿ ಮಾಡಬೇಕಾದುದು ಅತ್ಯಗತ್ಯ. ನೀವು ಹೇಳತಕ್ಕ loose talk ನಿಂದ ವಾತಾವರಣ ಕೆಟ್ಟುಹೋಗುತ್ತದೆ. ಹಾಗೆ ಮಾಡದೆ ಯಶಸ್ವಿಯಾಗುವುದಕ್ಕೆ ಸಹಕರಿಸಬೇಕು. ಈ ರೀತಿ ಪ್ರಯತ್ನ ಮಾಡಬೇಕು. ನಾನು ಒಂದು ಪ್ರಶ್ನೆಯನ್ನು ತಮ್ಮೆಲ್ಲರಿಗೆ ಕೇಳುತ್ತೇನೆ. ಪಾನನಿರೋಧ ನೀತಿಯ ಶಾಸನ ಯಶಸ್ವಿಯಾಗುವುದಕ್ಕೆ ತಾವು ಏನೇನು ಮಾಡಿದ್ದೀರಿ ಹೇಳಿರಿ. ಯಾವ ರೀತಿಯಿಂದಲೂ ಸಹಕರಿಸಿ ಸಹಾಯ ಮಾಡದೆ ಕೇವಲ ಪೋಲಿಸರ ಬಗ್ಗೆ ಬೈಯ್ಯುವ ಕೆಲಸ ಮಾಡುತ್ತಿದ್ದೀರಿ. ಪೋಲಿಸರು ಲಂಚ ತಿನ್ನುತ್ತಾರೆ ಎಂದು ಟೀಕೆ ಮಾಡುತ್ತೀರಿ. ಆದರೆ ಜನತೆಯ ಪ್ರತಿನಿಧಿಯಾಗಿ, ಜವಾಬ್ದಾರಿಯುತ ಉನ್ನತ ಸ್ಥಾನದಲ್ಲದ್ದುಕೊಂಡು ಈ ಸಭೆಯ ಸದಸ್ಯರಾಗಿ ಅದನ್ನು ತಡೆಗಟ್ಟುವುದಕೆ ಏನು ಮಾಡಿದ್ದೀರಿ ಹೇಳಿರಿ.

Sri M.C. NARASIMHAN.—If you would kindly yield for a minute Sir, these are rather serious matters. The Hon'ble Minister is trying to make an allegation that no constructive suggestion is given. Sir, actually, it has been brought to the notice of this House that even monies for temperance propaganda is reduced in a place like K.G.F. The Committees that have been constituted do not even meet. Even the persons in charge are disgusted of meeting and all the Members here unanimously suggested that there should be an enquiry into the whole working of prohibition with a view to better enforcement if possible or with a view to see whether it can be scrapped if it cannot be enforced properly.

5-30 P.M.

ಶ್ರೀ ವೀರೇಂದ್ರ ಪಾಟೀಲ್.—Public co-operation ಎಂದರೆ ಎರೊಪ್ಲೇನ್ ಒಂದು ಬೋರ್ಡ್ ಮಾಡಿದೆ. ಅದರ ಸದಸ್ಯರು ಸೇರುವಂತೆಯೇ ಇಲ್ಲವೆನ್ನುವಂಥ co-operation ಬೇಡ. ತಮ್ಮಂಥವರ ಸಹಕಾರ ಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಸದಸ್ಯರು ಏನು ಮಾಡಿದ್ದಾರೆಂದು ಮಾನ್ಯ ಮಂತ್ರಿಗಳು ಕೇಳಿದರು. ಮಂತ್ರಿಗಳು ಏನು ಮಾಡಿದ್ದಾರೆಯೋ ಅದನ್ನೇ ನಾವೂ ಮಾಡಿದ್ದೇವೆ.

ಶ್ರೀ ವೀರೇಂದ್ರ ಪಾಟೀಲ್.—ಇದು ನಾವೆಲ್ಲರೂ ಜವಾಬ್ದಾರಿಯಿಂದ ವಿಚಾರಮಾಡತಕ್ಕ ಪ್ರಶ್ನೆಯಾಗಿದೆ. ಸಾರ್ವಜನಿಕರು ಏನು ಮಾಡಬೇಕು, ಜನತೆಯಮೇಲೆ ಏನು ಜವಾಬ್ದಾರಿಯಿದೆ ಎಂದು ಹೇಳುತ್ತಿದ್ದೇನೆ. ವೈಯಕ್ತಿಕವಾಗಿ ಪ್ರತಿಯೊಬ್ಬ ಶಾಸನಸಭಾ ಸದಸ್ಯರೂ ಏನು ಮಾಡಿದ್ದಾರೆಂದು ಹೇಳುತ್ತಿಲ್ಲ.

(ಶ್ರೀ ವೀರೇಂದ್ರ ಪಾಟೀಲ್)

Illicit distillation ಎಲ್ಲಿ ನಡೆಯುತ್ತಿದೆಯೆಂದು ಯಾರ ಗಮನಕ್ಕಾದರೂ ತಂದಿದ್ದು, ಅಧಿಕಾರಿಗಳು ಕ್ರಮ ತೆಗೆದುಕೊಳ್ಳದೆ ಇದ್ದರೆ ಅಥವಾ ನಮ್ಮ ಗಮನಕ್ಕೆ ತಂದು ನಾವು ಕ್ರಮ ತೆಗೆದುಕೊಳ್ಳದೆ ಇದ್ದರೆ ಅದನ್ನು ಸರಿಪಡಿಸಬಹುದು. ಅದರೆ ನಮಗೆ ಸರಿಯಾಗಿ ಸಮಾಚಾರ ಸಿಕ್ಕುತ್ತಿಲ್ಲ.

Sri M. C. NARASIMHAN.—I will give you any Number of such instances.

ಶ್ರೀ ವೀರೇಂದ್ರ ಪಾಟೀಲ್.—ತಾವು ಬೇಕಾದಷ್ಟು ಸಮಾಚಾರ ಕೊಡಿ. ಅದರಮೇರೆ ನಾವು ಕ್ರಮ ತೆಗೆದುಕೊಳ್ಳಲಿಕ್ಕೆ ತಯಾರಿದ್ದೇವೆ. ನಾವು ಕ್ರಮ ತೆಗೆದುಕೊಳ್ಳದೆ ಇದ್ದರೆ ನಮ್ಮ ಮೇಲೆ ಆರೋಪಣ್ ಮಾಡಬಹುದು. ಇದರಲ್ಲಿ ಇನ್ನೊಂದು ಕಷ್ಟ ಬರುತ್ತದೆ. ಪಾನನಿರೋಧದ ಸಲುವಾಗಿ ನಮ್ಮವರು 77 ಸಾವಿರ ತಕ್ಸೀರುಗಳು ಕೋರ್ಟ್‌ನಲ್ಲಿವೆ. ಈ ಎಲ್ಲ ಕೇಸುಗಳನ್ನೂ reuglar Courtಗೆ ಒಯ್ದು ಅವು ತೀರ್ಮಾನವಾಗಲು ಒಹಳಕಾಲವಾಗುತ್ತದೆ. ಅಷ್ಟರಲ್ಲಿ ಪಂಚರು hostile ಆಗುತಾರೆ. ಒಂದು ವೇಳೆ ಶಿಕ್ಷೆಯಾದರೂ 25 ರೂಪಾಯಿ, 50 ರೂಪಾಯಿ, 100 ರೂಪಾಯಿ ಜುಲ್ಮಾನೆ ಹಾಕುತಾರೆ. ಕಳ್ಳಭಟ್ಟಿ ತಯಾರಿಕೆಯಲ್ಲಿ ಸಾವಿರಾರು ರೂಪಾಯಿ ಬರುವಾಗ 50 ರೂಪಾಯಿ, 100 ರೂಪಾಯಿ ಜುಲ್ಮಾನೆ ಕೊಟ್ಟರೆ ಅದು ಹೋಗಲಿಲ್ಲವೆನ್ನುವ ವಿಚಾರವೂ ಕೂಡ ಇದೆ.

ಪಾನನಿರೋಧವು ಯಶಸ್ವಿಯಾಗಲಾರದ್ದಕ್ಕೆ ಕಾರಣಗಳನ್ನು ಹೇಳುತ್ತೇನೆ. ಇವೊತ್ತು ನಮ್ಮಲ್ಲಿ ನಾಲ್ಕು ರೀತಿಯ ಪಾನನಿರೋಧ ಕಾನುನುಗಳು ಜಾರಿಯಲ್ಲಿವೆ. ಕೊಡಗು, ಬೊಂಬಾಯಿ, ದಕ್ಷಿಣಕನ್ನಡ ಜಿಲ್ಲೆ ಮತ್ತು ಮೈಸೂರು—ಈ ನಾಲ್ಕುಕಡೆಗಳಲ್ಲಿ ಪಾನನಿರೋಧ ಕಾನೂನು ಜಾರಿಯಲ್ಲಿದೆ. ಬೊಂಬಾಯಿ ಕಾನೂನಿನಲ್ಲಿ ಡೆಟರೆಂಟ್ ಪನಿಷ್‌ಮೆಂಟಿಗೆ ಅವಕಾಶ ಕೊಟ್ಟಿದ್ದಾರೆ. ಇನ್ನು ಕೆಲವು ಕಾನೂನುಗಳಲ್ಲಿ ಆ ರೀತಿ ಇಲ್ಲ. Uniform legislation ಮಾಡಿ Prohibition Bill ನಿಮ್ಮ ಮುಂದೆ ತಂದಿದ್ದೇವೆ. Compulsory imprisonment ಎಲ್ಲಿಯವರೆಗೆ ಇರುವುದಿಲ್ಲವೋ ಅಲ್ಲಿಯವರಿಗೂ ಪರಿಸ್ಥಿತಿ ಸುಧಾರಿಸುವುದಿಲ್ಲ. ನಾವು ಎಷ್ಟು ಆಗಬೇಕೆಂದು ಉದ್ದೇಶಪಡುತ್ತೇವೆಯೋ ಅಷ್ಟು ಆಗುವಹಾಗೆ ಇಲ್ಲ. ಆದುದರಿಂದ ತಾವು ಸಹಕರಿಸಿ ಆದಷ್ಟುಬೇಗ ಮಸೂದೆಯನ್ನು ಪಾಸ್ ಮಾಡಿದರೆ ಅನುಕೂಲ ವಾತಾವರಣ ಮಾಡುವುದಕ್ಕೆ ಅವಕಾಶವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈ ಮಸೂದೆ ಈಗಾಗಲೇ ಗೆಜೆಟ್ಟಿನಲ್ಲಿ ಪ್ರಾಯಿಷ್ ಆಗಿದೆ. ಸಾಧ್ಯವಾದರೆ ಇದೇ ಅಧಿವೇಶನದಲ್ಲಿಯೇ ಮುಗಿಸಬಹುದು.

ಪಾನನಿರೋಧವು ಯಶಸ್ವಿಯಾಗದೆ ಇರುವುದಕ್ಕೆ ಇನ್ನೊಂದು ಕಾರಣವಿದೆ. Dry area ಎಂದು ಮಾಡಿದ್ದೇವೆ. Addicts ಪರ್ಮಿಟ್ ಕೊಡಿ ಎಂದು ಕೇಳುತ್ತಾರೆ, foreigners ಪರ್ಮಿಟ್ ತರುತಾರೆ, Tourists ಪರ್ಮಿಗಳನ್ನು ತರುತ್ತಾರೆ. ಇದನ್ನೆಲ್ಲ ಬಂದ್ ಮಾಡಬಹುದೇ, ಹೇಗೆ ಮಾಡಬಹುದು ಎಂಬುದನ್ನು ನೋಡಬೇಕು. ಇದನ್ನು ನಮ್ಮಸಂಸ್ಥಾನಕ್ಕೆ ಮಾತ್ರ ಅನ್ವಯಿಸಲು ಆಗುವುದಿಲ್ಲ, ಪರ್ಮಿಟ್‌ಗಳನ್ನು ತಗೆದುಕೊಂಡು ಮಾಡುತ್ತಾರೆಂದೂ ಕೇಳಿದ್ದೇವೆ. Loop holes ಇದ್ದೇ ಇರುತ್ತದೆ. ಹೀಗೆಯೇ ನೀರಾ ವಿಷಯದಲ್ಲಿಯೂ ಆಗಿದೆ. ಹೆಂಡವಿಳಿಸುತ್ತಿದ್ದವರು ನಿರುದ್ಯೋಗಿಗಳಾದುದರಿಂದ ನೀರಾ ಸೊಸ್ಕೆಟಿ ಮಾಡಿಕ್ಕೊಟಿದ್ದೇವೆ. ಇದರ ಬಗ್ಗೆ ಬೊಂಬಾಯಿ ಕರ್ಣಾಟಕ ಭಾಗಗಳಿಂದ ದೂರುಗಳಿಲ್ಲ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಸಾಕಷ್ಟು ದೂರುಗಳು ಬಂದಿವೆ, Scrap ಮಾಡಿ ಅಥವಾ abolish ಮಾಡಿ ಎಂದು ಹೇಳಿದರು. ಒಂದು endorsement ನಲ್ಲಿ Scrap ಮಾಡಬಹುದು. ಐದು ಸಾವಿರ ಜನ palmgur ಮತ್ತು ನೀರಾ ಉದ್ಯಮಗಳಲ್ಲಿ ನಿರತರಾಗಿದ್ದಾರೆ. ಇವು ಸಾಕಷ್ಟುಸರಿಯಾಗಿ ನಡೆಯುತ್ತಿಲ್ಲವಾದುದರಿಂದ Uniform rules

ಮಾಡಿದ್ದೇವೆ. ಹಳೆಯ ಮೈಸೂರು ಭಾಗದಲ್ಲಿ ತುಮಕೂರು ಜಿಲ್ಲೆಯಿಂದ ಸಾಕಷ್ಟು ದೂರುಗಳು ಬಂದಿವೆ, ಬರುತ್ತಿವೆ. ಅಲ್ಲಿ ನೀರಾ ಸೊಸೈಟಿಯಲ್ಲಿ ಹೆಂಡ ಮಾರುತ್ತಾರೆಂದು ದೂರುಗಳು ಬಂದಿವೆ. ಸಮಾಜದ ಮೇಲೆಯೂ ಇದರ ಜವಬ್ದಾರಿ ಇದೆ ಎನ್ನುವುದು ತಮಗೆಲ್ಲ ತಿಳಿದಿರುತ್ತದೆ. ನೀರಾ ಮಾಡುವುದು ಸರ್ಕಾರದ ಏಜನ್ಸಿಯಿಂದಲ್ಲ, ಜನರಿಗೇ ಕೊಟ್ಟಿದ್ದೇವೆ. ಹೆಂಡ ಇಳಿಸಲು ಅರೇಳು ರೂಪಾಯಿ tax ಹಾಕುವಾಗ ನೀರಾ ತೆಗೆಯುವವರಿಗೆ ಏನೂ ಇಲ್ಲದಹಾಗೆ ಒಂದು ಗಿಡಕ್ಕೆ ನಾಲ್ಕಾಣೆ Nominal fee ಹಾಕಿಕೊಡುತ್ತೇವೆ. ಹೀಗೆ ಮಾಡಿದರೂ ಅವರು ಹೆಂಡ ಮಾರುತ್ತಾರೆ. ಇಂಥವರ ಲೈಸೆನ್ಸನ್ನು ಕೂಡ ವಜಾ ಮಾಡಿದ್ದೇವೆ. ಸಹಕಾರ ಸಂಘವನ್ನು ಮಾಡಿಕೊಂಡು ಬೇರೆ ಉದ್ಯೋಗವಿಲ್ಲದೆ ಇರುವುದರಿಂದ ಸಂಘದ ಸದಸ್ಯರಾಗಿ ಉಪಜೀವನ ಮಾಡಿಕೊಳ್ಳಿ ಎಂದರೆ ಅವರು ದುರ್ವ್ಯವಹಾರ ಮಾಡಿದರೆ ಏನು ಮಾಡೋಣ? ಆದರ ನಲುವಾಗಿ ಈಗಾಗಲೇ Uniform draft Neera Rules publish ಆಗಿದೆ. ಆದರ ಪ್ರಕಾರ ಯಾವ ಕಾಲದಲ್ಲಿ ನೀರಾ ಮಾರಾಟ ಮಾಡಬೇಕು ಎಂದು ನಿಗದಿಮಾಡಿದೆ. ಹಾಗೆ ಮಾಡದೆ ಹೋದರೆ ಅಂಥವರ ಲೈಸನ್ಸ್ ವಜಾ ಮಾಡಲಾಗುವುದು. ಅಲ್ಲದೆ ಲೈಸನ್ಸ್ ಕೊಡಬೇಕಾದರೆ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯವರು ಸಿಫಾರ್ಸು ಮಾಡಬೇಕು ಏನೆಂದರೆ ಇಂಥವರು ಹೆಂಡ ಮಾರುವವರಲ್ಲ, ನೀರಾ ಮಾರುವವರು, palmgur ತಯಾರುಮಾಡವರು ಎಂದು ಶಿಫಾರ್ಸು ಮಾಡಬೇಕು. ಅಂಥವರಿಗೆ ಮಾತ್ರ ಲೈಸನ್ಸ್ ಕೊಡುತ್ತೇವೆ. ಇತರರಿಗೆ ಕೊಡುವುದಿಲ್ಲ. Uniform Neera Rules ಬಂದರೆ ಎಲ್ಲ ಸರಿಹೋಗಬಹುದು.

ಶ್ರೀ ಬಿ. ಇ. ರಾಮಯ್ಯ.—ಈಗಾಗಲೇ ನೀರಾ ಸೊಸೈಟಿಗಳನ್ನು ಮಾಡಿದ್ದೀರಿ. ಅವು ಯಶಸ್ವಿಯಾಗಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಎಲ್ಲ ಕಡೆಯೂ ಯಶಸ್ವಿಯಾಗಿಲ್ಲವೆಂದು ಹೇಳುವುದಕ್ಕಾಗುದಲ್ಲ ಸರ್ಕಾರದ ಮಟ್ಟ ಹೇಳಬೇಕಾಗಿದ್ದರೆ ಎಲ್ಲೆಲ್ಲಿ ದೂರುಗಳು ಬಂದಿವೆಯೋ ಅಲ್ಲಿ ನ್ಯಲ್ಪವಾದರೂ ಸತ್ಯಾಂಶ ಕಂಡುಬಂದರೆ ಅಂಥ ಸೊಸೈಟಿಗಳ ಲೈಸೆನ್ಸನ್ನು ರದ್ದು ಮಾಡಿದ್ದೇವೆ.

ಶ್ರೀ ಬಿ. ಇ. ರಾಮಯ್ಯ.—ಅವರೂ ಕೂಡ ಪೋಲೀಸಿನವರಿಗೆ ಲಂಚಕೊಟ್ಟು ಹೆಂಡವನ್ನು ಮಾರುತ್ತಿದ್ದಾರೆ ಏಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಕೆಲವು ದೂರುಗಳು ಬಂದಿವೆ. ಅವರ ಲೈಸೆನ್ಸ್ ರದ್ದು ಮಾಡಿದ್ದೇವೆ.

ಶ್ರೀ ಬಿ. ಇ. ರಾಮಯ್ಯ.—ನೀರಾ ಎಂದು ನೀರಾ ಕೇಂದ್ರಗಳಲ್ಲಿ ಹೆಂಡವನ್ನು ಮಾರುವುದು ತಮ್ಮ ಗಮನಕ್ಕೆ ಬಂದಿದೆಯೇ? ಆಂಧ್ರದಲ್ಲಿ ಕೂಡ ಇದೇ ರೀತಿ ನೀರಾ ಸೊಸೈಟಿಗಳು fail ಆಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ನೀರಾ ಸೊಸೈಟಿಗಳು fail ಆಗಿವೆ ಎಂದು ಹೇಳಿಲ್ಲ. ಕೆಲವು ಸೊಸೈಟಿಗಳು ನೀರಾ ಹೆಸರಿನಮೇಲೆ ಹೆಂಡವನ್ನು ಮಾರುತ್ತಿದ್ದಾರೆಂದು ನಮ್ಮಗಮನಕ್ಕೆಬಂದು ವಿಚಾರಣೆ ನಡೆಸಿದ್ದೇವೆ. ಅವರು ಹೆಂಡ ಮಾರಿದ್ದಾರೆಂದು ಕಂಡುಬಂದಾಗ ಆ ಸೊಸೈಟಿಗಳ ಲೈಸೆನ್ಸನ್ನು ರದ್ದು ಮಾಡಿದ್ದೇವೆ ಎಂದು ಹೇಳಿದ್ದೇನೆ. ಈ ರೀತಿ ಎಲ್ಲಿಂದಲಾದರೂ ದೂರುಗಳು ಬಂದರೆ ನೂಕ್ತಕ್ರಮ ತೆಗೆದು ಕೊಳ್ಳುತ್ತೇವೆ. ಯಾವುದೇ ರೀತಿಯಲ್ಲಿ ದಯಾದಾಕ್ಷಿಣ್ಯಗಳನ್ನು ತೋರಿಸದೆ ಅಂಥವರ ಲೈಸೆನ್ಸ್ ರದು ಮಾಡುತ್ತೇವೆಂದು ಹೇಳುತ್ತೇನೆ.

ಜನತೆಯ ಮೇಲೆ ಕೂಡ ಎಷ್ಟು ಜವಾಬ್ದಾರಿ ಇದೆ ಎನ್ನುವುದರ ನಲುವಾಗಿ ಒಂದು ವಿಷಯವನ್ನು ಹೇಳುತ್ತೇನೆ. ನಾನು ಈ ಶಾಖೆಯ ಮಂತ್ರಿಯಾದ ರಾಗಾಯ್ತು ಪ್ರತಿ ದಿವಸ ಫ್ರೆಂಚ್ ಪಾಲಿಷ್ ತಯಾರಿಸಲು ಡೀನೇಚರ್ಡ್‌ಸ್ಪಿರಿಟ್ ಬೇಕು ಎಂದು ಅರ್ಜಿಗಳು ಬರುತ್ತಿವೆ.

(ಶ್ರೀ ವೀರೇಂದ್ರ ಪಾಟೀಲ್)

ನನಗೆ ಯಾವುದೂ ಗೊತ್ತಿರಲಿಲ್ಲ. ಹೀಗೆ ತೆಗೆದುಕೊಂಡು ಹೋಗತಕ್ಕ ಸ್ಪಿರಿಟ್‌ನಲ್ಲಿ ಅರ್ಧವಷ್ಟು ನ್ಯಾದರೂ ಫ್ರೆಂಚ್ ಪಾಲಿಷ್ ಮಾಡಲು ಉಪಯೋಗಿಸುತ್ತಾರೆಯೋ ಇಲ್ಲವೋ ಎನ್ನುವ ಸಂಶಯ ಬರುತ್ತಿದೆ. ಡೀನೇಚರ್ಡ್‌ಸ್ಪಿರಿಟ್‌ಗೆ ಸುಣ್ಣದ ನೀರನ್ನು ಬೆರೆಸಿದರೆ re-natured ಆಗುತ್ತದೆ ಮತ್ತು ಅದನ್ನು ಜನ ಉಪಯೋಗಿಸುತ್ತಾರೆಂದು ಕೇಳಿದ್ದೇನೆ. ಅದನ್ನು ಹೆಂಡವೆಂದು ಮಾರಿ ಅದರಿಂದ ಬೇಕಾದಷ್ಟು ರಾಛಗಳಿಸುತ್ತಾರೆ. ಆದರೆ ಫ್ರೆಂಚ್ ಪಾಲಿಷು ಮಾಡತ್ತೇಪೆ, ಇಂಡಸ್ಟ್ರಿ ಮಾಡುತ್ತೇವೆ ಎಂದು ಡೆಪ್ಯುಟಿ ಕಮೀಷನರ ಮತ್ತು ಎಕ್ಸೈಜು ಕಮೀಷನರವರ ಮೂಲಕ ಬಂದ ಅರ್ಜಿಗಳನ್ನು ಮಾತ್ರ ವಿಚಾರಮಾಡುತ್ತಿದ್ದೇವೆಯೇ ಹೊರತು, ನುಮ್ಮನೆ ವಿಧಾನಸೌಧ ರೂಂನಲ್ಲಿ ಕುಳಿತುಕೊಂಡು ನಾವು ನಿರ್ಣಯ ಮಾಡವುದಕ್ಕೆ ಸಾಧ್ಯವಿಲ್ಲ. ಇದು ಕೂಡ ದುರುಪಯೋಗವಾಗತ್ತದೆ ಎನ್ನುವ ಪ್ರಶ್ನೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ.

ಶ್ರೀ ಬಿ. ಇ. ರಾಮಯ್ಯ.—Prohibition State Level Committee ಯನ್ನೇಕೆ ಮಾಡಬಾರದು ?

ಶ್ರೀ ವೀರೇಂದ್ರ ಪಾಟೀಲ್.—ನಾನು ಇನ್ನೊಂದು ಪ್ರಶ್ನೆಯನ್ನು ತಮ್ಮಲ್ಲಿ ಹೇಳುತ್ತೇನೆ. ಯಾವಾಗಲೂ ಪ್ರೊಹಿಬಿಷನ್ನು ಬೇಗ ಕಾರ್ಯಗತವಾಗಲು ಪಬ್ಲಿಕ್ ಕೋ-ಆಪರೇಷನ್ ಬಹಳ ಅವಶ್ಯಕವಿದೆ. ಈಗ ಸಾಮಾಜಿಕ ಸಂಸ್ಥೆಗಳಂತಹ ಎಷ್ಟೋ ಸಂಸ್ಥೆಗಳು ಇವೆ. ಭಾರತ ಸೇವಾ ಸಮಾಜ, ಭಾರತ ಸೇವಾದಳ, ಸೋಷಿಯಲ್ ವೆಲ್‌ಫೇರ್ ಬೋರ್ಡು ಹಾಗೂ ನರ್ಸೋ ದಯ ಇತ್ಯಾದಿ ಸಂಸ್ಥೆಗಳಿವೆ—ಈ ಎಲ್ಲ ಸಂಸ್ಥೆಗಳಲ್ಲಿ ಕೆಲಸ ಮಾಡುವವರು ಪ್ರೊಹಿಬಿಷನ್ನಿನ ವಿಚಾರವಾಗಿ ಯಾವ ರೀತಿ ಸಹಾಯ ಮಾಡಬಹುದು ಮತ್ತು ಇನ್ನಾರಾದರೂ ಇದರ ಬಗ್ಗೆ ಸೂಕ್ತವಾದ ಸಲಹೆ ಬಂದಾಗ ಅದಕ್ಕೆ ಸಹಾಯ ಮಾಡುವುದಕ್ಕೆ ಅಭ್ಯಂತರವೇನಿಲ್ಲ. ಆ ರೀತಿ ಈ ಸಂಸ್ಥೆಗಳು ಕೂಡ ಮುಂದೆ ಬರಬಹುದು.

ಶ್ರೀ ಕೆ. ಪುಟ್ಟಸ್ವಾಮಿ.—ಈಗ್ಗೆ ಎರಡು-ಮೂರು ತಿಂಗಳಿನಲ್ಲಿ ಬೆಂಗಳೂರಿನಲ್ಲಿರುವ ಖೋಡೆ ಈಶ್ವರನಾ ಎಂಬುವರಿಗೆ ಹೊಸದಾಗಿ ಲೈಸನ್ಸ್ ಕೊಟ್ಟಿದ್ದಾರೆ. ಇದು ನಿಜವೇ ?

ಶ್ರೀ. ವೀರೇಂದ್ರ ಪಾಟೀಲ್.—ಅವರಿಗೆ Brewery ಲೈಸನ್ಸಿದೆ. ಡಿಸ್ಟಿಲರಿ ಲೈಸನ್ಸನ್ನು ಯಾವ ಆಧಾರದ ಮೇಲೆ ಕೊಡಲಾಗಿದೆಯೇ ಇಲ್ಲವೇ ಎನುವುದನ್ನು ಎನ್‌ಕ್ವೈರಿ ಮಾಡದೆ ತಮಗೆ ಹೇಳಲಿಕ್ಕೆ ಸಾಧ್ಯವಿಲ್ಲ. Brewery Licence ಆದರೆ ಅವರದೇ ಇದೆ.

ಇನ್ನೊಂದು ವಿಚಾರವೇನೆಂದರೆ, ನಮ್ಮಲ್ಲಿ ಜನ ಕುಡಿಯುವ ಚಟ ಇರುವವರು ನಾಲ್ಕರಿಂದ ಏಳರವರೆಗೆ ಇದೆ. ಅವರಿಗೆ ಈ ವೇಳೆಯಲ್ಲಿ ಬೇರೆ ಯಾವುದಾದರೂ Drinks ನ್ನು ಕೊಟ್ಟು ತಪ್ಪಿಸಲು ಇದಕ್ಕಾಗಿ ಎಷ್ಟೋ ರಿಕ್ರಿಯೇಷನ್ನು ಕ್ಲಬ್ಬುಗಳಿವೆ. ಇಂತಹ ಕ್ಲಬ್ಬುಗಳವರೇ ಸೇರಿ ಒಂದು ಸೊಸೈಟಿ ಮಾಡುವ ಜವಾಬ್ದಾರಿಯೂ ಇದೆ. ಆದರೆ ಇನ್ನೂ ಎಷ್ಟೋ ಕ್ಲಬ್ಬುಗಳಲ್ಲಿ ರಿಕ್ರಿಯೇಷನ್ನಿಗಾಗಿ ಎಂದಿದ್ದರೂ ಕೂಡ ಅಲ್ಲಿ ಗ್ಯಾಂಬ್ಲಿಂಗ್ ನಡೆಯುತ್ತಿದೆ. ಸರಕಾರದವರಿಗೂ ಇಲ್ಲಿ Gambling Dens ಗಳಾಗಿವೆ ಎನ್ನುವುದು ಗೊತ್ತಾಗಿದೆ.

ಶ್ರೀ. ಜೆ. ಬಿ. ಮಲ್ಲಾರಾಧ್ಯ.—ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ನು ರೂಲ್ಸ್‌ಗಳನ್ನು ಸ್ಕ್ರುಟಿನೈಜ್ ಮಾಡಬೇಕು.

ಶ್ರೀ. ವೀರೇಂದ್ರ ಪಾಟೀಲ್.—ನಾನು ಹೇಳುವುದು ಸೆಂಚುರಿ ಕ್ಲಬ್ಬಲ್ಲಾಗಲಿ, ಮತ್ತೊಂದು ಕ್ಲಬ್ಬಿನಲ್ಲಾಗಲಿ ಈ ರೀತಿ ನಡೆಯುತ್ತಿದೆ ಎಂದು ಹೇಳುತ್ತಿಲ್ಲ. ಈ ರೀತಿಯಾದ ಕೆಲವು ಕ್ಲಬ್ಬುಗಳನ್ನು ರಿಕ್ರಿಯೇಷನ್ನಿಗಾಗಿ ಮಾಡಿದ್ದರೂ ಕೂಡ ಅಲ್ಲಿ ಗ್ಯಾಂಬ್ಲಿಂಗು ನಡೆಯುತ್ತಿದೆ. ನಾನು ಹಿಂದೆ ಡೆಪ್ಯುಟಿ ಕಮೀಷನ್ನರಾಗಿದ್ದಾಗ ಚಿತ್ರದುರ್ಗಕ್ಕೆ ಹೋಗಿದ್ದಾಗ ಪ್ರತಿಯೊಂದು

ಕಡೆಯಲ್ಲಿಯೂ ಎರಡು-ಮೂರು ಜನ ಸೇರಿ ಕ್ಲಬ್ ಮಾಡಿಕೊಂಡಿದ್ದರು. ಆಲ್ಲ ಹೋಗಿ ನೋಡಿದಾಗ ಅವೆಲ್ಲಾ Gambling Dens ಗಳಾಗಿದ್ದವು.

ನಮ್ಮ ಸರ್ಕಾರದವರು ಕೂಡ ಈ ಹುಳುಕನ್ನು ಆದಷ್ಟು ಹೆಚ್ಚಾಗಿ ತೆಗೆದುಹಾಕಲು ಸರಿಯಾದ ಮೆಷಿನರಿ ಇರಬೇಕೆಂದು ಹೇಳುತ್ತಾರೆ. ಆದರೆ ಪೋಲೀಸಿನ ಕಡೆಗೆ ಕೊಡಬಾರದೆಂದು ಇಲ್ಲಿ ಹೇಳಿದರು. ನಾನು ಇಷ್ಟು ಮಾತ್ರ ಹೇಳಬಲ್ಲೆ. ಪೋಲೀಸು ಖಾತೆಯ ಮಾನ್ಯ ಮಂತ್ರಿಗಳು ಕೂಡ ವಿಚಾರ ವಿನಿಮಯ ಮಾಡಿ ಎಷ್ಟೇ ಕಷ್ಟ ಬಂದರೂ ಇದನ್ನು ವಿಚಾರ ಮಾಡಬೇಕೆಂದು ಯೋಚನೆ ಇಟ್ಟುಕೊಂಡಿದ್ದೇವೆ. ಪೋಲೀಸಿನವರು ಮಾಡದೆ ಬೇರೆ ಯಾವ ಮೆಷಿನರಿಯನ್ನೂ ಕ್ರಿಯೇಟು ಮಾಡಿಲ್ಲ. ಇದೂ ಒಂದು ತೀರ್ಪ್ರವಾದ ಪರಿಸ್ಥಿತಿಯಾಗಿದೆ ಪೋಲೀಸಿನವರಲ್ಲದೆ ಬೇರೆ ಇಂತಹ ಮೆಷಿನರಿ ಇರಬೇಕು ಎನ್ನುವ ನಲಹೆ ಇಲ್ಲಿಯತನಕ ನನ್ನ ಮುಂದೆ ಬಂದಿಲ್ಲ. ಇಲ್ಲಿಯೂ ಯಾರೂ ನಲಹೆ ಮಾಡಿಲ್ಲ.

Sri D. ABDUL RASHID.—I have made a definite suggestion in my speech. You entrust it to the Excise Department.

ಶ್ರೀ. ವೀರೇಂದ್ರಪಾಟೀಲ್.—1954 ರಿಂದಲೂ ಮೈಸೂರಿನಲ್ಲಿ ಎಕ್ಸೈಜ ಶಾಖೆಯ ಕೈಕೆಳಗೆ ಈ ಪ್ರೊಹಿಬಿಷನ್ನು ಇತ್ತು. ಆಗ ಎಕ್ಸೈಜ್ ಶಾಖೆಗೆ ಸಾಧ್ಯವಿಲ್ಲವೆಂದು ಪೋಲೀಸು ಶಾಖೆಗೆ ಹೋಯಿತು. ಇದೇ ರೀತಿ ಆಂಧ್ರದಲ್ಲಿ ಪರೀಕ್ಷೆ ಮಾಡಬೇಕೆಂದು ಹೆಬ್ಬುವರಿ ತಿಂಗಳನಲ್ಲಿ ಒಂದು ಹೊಸ ಮೆಷಿನರಿಯನ್ನು ಮಾಡಿದ್ದಾರೆ. ನಾವೂ ಆ ರೀತಿಯಾದ ಹೊಸ ಮೆಷಿನರಿ ಮಾಡಬೇಕಾದರೆ, ಪ್ರತಿಯೊಂದು ತಾಲ್ಲೂಕಿನ ಮುಚ್ಚಕ್ಕೂ ಕೂಡ ಈ ಮೆಷಿನರಿ ಬೇಕಾಗುತ್ತದೆ. ಇದರ ಮೇರೆ ಇದಕ್ಕೆ ಎಷ್ಟು ಕೋಟಿ ರೂಪಾಯಿಗಳು ಖರ್ಚಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಆಂಧ್ರದಲ್ಲಿ Excise Prohibition Board ಎಂದು ಒಂದು ರೀತಿಯಾಗಿ ಮಾಡಿ ಎಕ್ಸ್‌ಪೆರಿಮೆಂಟು ಏನಾಗುತ್ತದೆ ಎನ್ನುವುದನ್ನು ಒಂದು ತಿಂಗಳು ನೋಡೋಣ. ಅನಂತರ ಸರಿಯಾಗವಿದ್ದರೆ ಪೋಲೀಸು ಕಡೇಗೇ ಬಿಡೋಣವೇ ಎಂದು ನೋಡುತ್ತಿದ್ದಾರೆ. ಇಲ್ಲಿಸಿಟ್ ಡಿಸ್ಟಿಲೇಷನ್ನು ಮಾಡುವಂತಹ ಜನರನ್ನು ಕುಡಿಯದಂತೆ ಮಾಡಲು ಅವರನ್ನು ಎಜುಕೇಟು ಮಾಡಲು ಎಲ್ಲ ತಾಲ್ಲೂಕುಗಳಲ್ಲಿಯೂ ಎನ್. ಇ. ಎಸ್. ಬ್ಲಾಕುಗಳು, ನ್ಯಾಷನರ್ ಡೆವಲಪ್‌ಮೆಂಟು ಬ್ಲಾಕುಗಳು ಇಲ್ಲಿ ಸೇವೆ ಮಾಡುತ್ತಿರುವಂತಹ ಜನ ಮುಂದೆ ಬಂದು ಸಹಾಯ ಮಾಡಬಹುದು. ನಮ್ಮ ಜನ ಸಿವಿಲೈಸ್ಡ್ ಆಗಿಲ್ಲ, ಅನ್‌ಸಿವಿಲೈಸ್ಡು ಆಗಿದ್ದಾರೆ ಎನ್ನುವುದಾಗಿದ್ದರೆ ಅದು ಬೇರೆ. ಕಾನೂನು ಪ್ರಕಾರ ನೋಡಿಕೊಳ್ಳುವಾಗ Law-abiding ನಂತೆ ಒಂದು ಸೆನ್ಸ್ ಬರುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಕುಡಿಯುವವರು ಏನು ಮಾಡಿದರೂ ಕುಡಿತವನ್ನು ಬಿಡುವುದಿಲ್ಲ ಎನ್ನುವ ಒಂದು ಅಭಿಪ್ರಾಯವೂ ಇದೆ. ಈ ಇಲ್ಲಿಸಿಟ್ ಡಿಸ್ಟಿಲೇಷನ್ನನ್ನು ಮಾಡುವವರು ಯಾರು ಮತ್ತು ಅವರ ಸಹಾಯಕ್ಕೆ ಯಾರಿದ್ದಾರೆ ಎನ್ನುವುದನ್ನು ಹಿಡಿಯುವುದಕ್ಕೆ ಆಗುವುದಿಲ್ಲ. ಏಕೆಂದರೆ ಇಲ್ಲಿರುವವರು ಗೂಂಡಾಗಿರಿ ಜನ ಮತ್ತು ಇನ್ನಿತರ Unsocial elements ಗಳು. ಇವರನ್ನು ತಪ್ಪಿಸಲು ನಾವು ಬಿಳೀ ಟೋಪಿ ಹಾಕಿಕೊಂಡು ಹೋದರೂ ಕಷ್ಟ, ನಿಮ್ಮಂತವರು ಕೆಂಪು ಟೋಪಿಗಳನ್ನು ಹಾಕಿಕೊಂಡು ಹೋದರೂ ಕಷ್ಟ.

Sri J. B. MALLARADHYA.—So, Khaki topi is the only solution.

ಶ್ರೀ ವೀರೇಂದ್ರ ಪಾಟೀಲ್.—ನನಗನಿಸುವುದು ಪೋಲೀಸು ಬಿಟ್ಟರೆ ಗತ್ಯಂತರವಿಲ್ಲ. ಈ ಪೋಲೀಸಿನವರ ಸಹಾಯದಿಂದಲೇ ಈ ಪ್ರೊಹಿಬಿಷನ್ನನ್ನು Successful ಮಾಡಿಸಿಕೊಳ್ಳಬೇಕೆಂದು ನನಗನಿಸುತ್ತದೆ. ಈ ಸಂದರ್ಭದಲ್ಲಿ ಪೋಲೀಸು ಬಿಟ್ಟರೆ ಏನು ಮಾಡಬಹುದು ಎನ್ನುವುದನ್ನು ವಿಚಾರ ಮಾಡುತ್ತಿದ್ದೇನೆ. ನುಮಾರು 15–16 ಜಿಲ್ಲೆಗಳಲ್ಲಿ ಪ್ರೊಹಿಬಿಷನ್ನು ಮಾಡಿದ್ದೇವೆ. ಒಂದು ಅಥವ ಎರಡು ಜಿ ಗಳಲ್ಲಿ ಇನ್ನೂ Intensive enforcement ಆಗಿ ನಡೆಸಬೇಕೆಂದು ವಿಚಾರವಿದೆ. ಈ ಪ್ರಪೋಸಲ್ಲು ಕೂಡ ನಮ್ಮ ಮುಂದಿದೆ. ನಮ್ಮ ನಿಮ್ಮ ಎಲ್ಲ ಶಕ್ತಿಯನ್ನೂ ಬೇಕಾದರೆ ಹಾಕಿ ತಾವು ಸಹಕಾರ ಮಾಡಿ. ಈ ಪೋಲೀಸು ಇಲಾಖೆಯಲ್ಲಿ ಎಷ್ಟೋ ಇಂಟರೆಸ್ಟಿನಿಂದ, ಎಷ್ಟು upright ಆಗಿ ಕೆಲಸ ಮಾಡುವಂತಹ ಆಫೀಸರುಗಳಿದ್ದಾರೆ. ಇಂತಹ

(ಶ್ರೀ ವೀರೇಂದ್ರ ಪಾಟೀಲ್)

ಆಫೀಸರುಗಳ ಸಹಾಯದಿಂದ ಒಂದು ವರ್ಷ ಕಾಲ ಒಂದು ಎಕ್ಸ್‌ಪೆರಿಮೆಂಟು ಮಾಡೋಣ. intensive ಆಗಿ ಒಂದು ಅಥವಾ ಎರಡು ಜಿಲ್ಲೆಗಳಲ್ಲಿ ನರಿಯಾದ ಎರಡೆರಡು ಸ್ಪೆಷಲ್ ಡಿವಿಜನ್ನನ್ನು ಮಾಡಿ, ಎರಡು-ಮೂರು ತಾಲ್ಲೂಕುಗಳಿಗೆ ಒಂದು ವ್ಯಾನು ಕೊಟ್ಟು ಸರಿಯಾದ ಅಧಿಕಾರಿಗಳನ್ನು ನೇಮಿಸಿ, ಒಂದು ವರ್ಷ ಪರೀಕ್ಷೆ ಮಾಡಿ ನೋಡಿ. ಒಂದು ವೇಳೆ ಇದು failure ಆದರೆ ನಾನು failure ಆಗಿದೆ ಎಂದು ನಿಮ್ಮ ಮುಂದೆ ಹೇಳುತ್ತೇನೆ. ಇಷ್ಟನ್ನೂ wipe out ಮಾಡಲು ಕೋಟ್ಯಾಂತರ ರೂಪಾಯಿಗಳನ್ನು ಸುರಿದು ಬೆಲೆ ಬರುವಂತಾದರೆ ಅನಂತರ ಮುಂದೆ ಹೋಗೋಣ ಎನ್ನುವ ವಿಚಾರವೂ ಇದೆ. ಈ ಸಂದರ್ಭದಲ್ಲಿ ನನಗೆ ತಿಳಿದು ಬಂದಿರ ವಂತೆ ಇಷ್ಟು ಮಾತ್ರ ಹೇಳಬಲ್ಲೆ. Prohibition Successful ಆಗುವುದಾದರೆ ನಾವೂ ತೀವ್ರ ಯೋಚನೆ ಮಾಡಬೇಕು. ಈ ವಿಚಾರವನ್ನು ಸರಕಾರ ಮುಂದೆ ಆದಷ್ಟು ತೀವ್ರವಾಗಿ ನಿರ್ಣಯ ತೆಗೆದುಕೊಳ್ಳಬೇಕೆಂದು ಇದೆ. ಪಬ್ಲಿಕ್ ಸಹಕಾರ ಮತ್ತು ಪಬ್ಲಿಕ್ ರೆಪ್ರೆಸೆಂಟೇಟಿವ್ಸ್, ಸಮಾಜಸುಧಾರಕರು ಇವರ ಸಹಾಯವೂ ಇದಕ್ಕೆ ಅಗತ್ಯ ಎಂದು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಮಾಲ ಮರಿಯಪ್ಪ.—(ಸಹಕಾರ ಶಾಖಾ ಸಚಿವರು)—ಸ್ವಾಮೀ, ಸಹಕಾರ ಸಂಸ್ಥೆಗಳ ವಿಚಾರದಲ್ಲಿ ಹಚ್ಚಿನ ಅಕ್ಷೇಪಣೆಗಳೇನೂ ಇಲ್ಲ. ಆದರೂ ಈಗ ಬಂದಿರತಕ್ಕ ಅಕ್ಷೇಪಣೆಗಳಿಗೆ ಸಮಾಧಾನ ಕೊಡುವುದು ನನ್ನ ಕರ್ತವ್ಯ. ಕೋಲಾರ ಜಿಲ್ಲೆಯ ಮಾನ್ಯ ಸದಸ್ಯರೊಬ್ಬರು ಅಲ್ಲಿರುವ ಕೊಲಾರ ಜಿಲ್ಲಾ ಬ್ಯಾಂಕಿನಲ್ಲಿ ಬಂದಂತಹ ವಿಷಯವನ್ನು ಇಲ್ಲಿ ಹೇಳಿದ್ದರಿಂದ ಅದಕ್ಕೆ ಇಲ್ಲಿ ಉತ್ತರ ಹೇಳಬೇಕೆಂದು ಇದ್ದೇನೆ.

ಅವರು ಕೋಲಾರ ಜಿಲ್ಲೆಯಲ್ಲಿ ಎಷ್ಟುಲಕ್ಷ ಮಧ್ಯಮಾವಧಿ, ಎಷ್ಟುಲಕ್ಷ ಅಲ್ಪಾವಧಿ, ಎಷ್ಟು ಲಕ್ಷ ಪ್ರೊಡ್ಯೂಸ್ ಲೋನ್–ಇತ್ಯಾದಿಗಳನ್ನು ಕೊಟ್ಟಿದ್ದಾರೆ, ಯಾವ್ಯಾವ ತಾಲ್ಲೂಕಿಗೆ ಎಷ್ಟೆಷ್ಟು ಹಣ ಹಂಚಿಕೆಯಾಗಿದೆ ಎಂಬ ಅಂಶಗಳನ್ನು ನಿಖರವಾಗಿ ತಿಳಿಯುವ ಅಭ್ಯಾಸ ಮಾಡಿದ್ದಾರೆ, ಬಹುಶಃ ಅವರು ಆ ಅಂಕಅಂಶಗಳಮೇರೆ ಆ ರೀತಿಯಾಗಿ ಆರೋಪಣೆಯನ್ನು ಮಾಡುತ್ತಿರಲಿಲ್ಲವೆಂದು ನಾನು ಭಾವಿಸುತ್ತೇನೆ. ಕೋಲಾರ ಜಿಲ್ಲಾ ಬ್ಯಾಂಕಿನವರು ಅಲ್ಪಾವಧಿ, ಮಧ್ಯಮಾವಧಿ, ಪ್ರೊಡ್ಯೂಸ್ ಲೋನ್–ಇವೆಲ್ಲಾ ಸೇರಿ 1960–61ನೇ ಸಾಲಿನಲ್ಲಿ 80 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿದ್ದಾರೆ. 1959–60ನೇ ಸಾಲಿನಲ್ಲಿ ಸುಮಾರು 67 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಆ 67 ಲಕ್ಷ ರೂಪಾಯಿಗಳನ್ನೂ ಸಹ ವಾಯಿದೆಯೊಳಗೆ ಸರಿಯಾಗಿ ವಸೂಲುಮಾಡಿ ಬೇಬಾಕಿ ಮಾಡಿದರು. 1960–61ನೇ ಸಾಲಿನಲ್ಲಿ 80 ಲಕ್ಷ ರೂಪಾಯಿಗಳಲ್ಲಿ ಈಗಾಗಲೇ ಸಾಕಷ್ಟು ಹುರುಕಾಗಿ ವಸೂಲು ನಡೆದು ಈ ತಿಂಗಳು 31ನೇ ತಾರೀಖಿನೊಳಗಾಗಿ ಬೇಬಾಕಿ ಮಾಡುತ್ತಿದ್ದೇವೆಂಬ ಭರವಸೆಯನ್ನು ಹೊಂದಿದ್ದಾರೆ. ಆದ್ದರಿಂದ ವಿಶೇಷವಾಗಿ ಸಾಲವನ್ನು ಹರಡಿದ್ದಾರೆಂದು ಹೇಳತಕ್ಕದ್ದು ಸರಿಯಲ್ಲ. ಅಂದ ಮೇಲೆ 67 ಲಕ್ಷದಿಂದ 80 ಲಕ್ಷಕ್ಕೆ ಹೆಚ್ಚಿದೆ ಅಂದರೆ 13 ಲಕ್ಷವನ್ನು ಪ್ರಗತಿದಾಯಕವಾದ ಹೆಜ್ಜೆಯಲ್ಲಿ ವಸೂಲಾತಿಯನ್ನು ಮುಂದುವರಿಸಿಕೊಂಡು ಹೋಗಿದ್ದಾರೆ. ಎರಡನೆಯದಾಗಿ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲ ಪಡೆದು ಜಮೀನುಗಳನ್ನು ತೆಗೆದುಕೊಳ್ಳುವುದಕ್ಕೆ ಕೆಲವು ನಿಯಮಾವಳಿಗಳಿವೆ. ಆ ನಿಯಮಗಳಿಗನುಸಾರವಾಗಿ ಅನೇಕ ರೀತಿಯಲ್ಲಿ ಸಾಲಗಳನ್ನು ಕೊಟ್ಟಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಕೊಚ್ಚಿರತಕ್ಕ ಸಿಮೆಂಟ್ ಲೆಕ್ಕವನ್ನು ತೆಗೆದುಕೊಂಡು ಹೋಲಸಿ ನೋಡಿದ್ದರೆ ಆ ಮಾತನ್ನು ಮಾನ್ಯ ಸದಸ್ಯರು ಆಡುತ್ತಿರಲಲ್ಲ. ಬೇರೆ ಬೇರೆ ಕೆಲವು ಜಿಲ್ಲಾ ಬ್ಯಾಂಕಿನವರು ಹತ್ತಿರ ಹತ್ತಿರ ಒಂದು ಕೋಟಿಯನ್ನು ಮುಟ್ಟಿವೆ. ಇನ್ನು ಕೆಲವು ಬಹಳ ಕಾಲದಿಂದ ಸ್ಥಾಪನೆಯಾಗಿರತಕ್ಕ ಜಿಲ್ಲಾ ಬ್ಯಾಂಕುಗಳು ಬೊಂಬಾಯಿ ಕರ್ನಾಟಕದಲ್ಲಿ ಕೋಟಿಗಿಂತಲೂ ಮೀರಿ ಸಾಲವನ್ನು ಹರಡಿದ್ದಾರೆ. ಆದ್ದರಿಂದ ಅಂಕಿಅಂಶಗಳನ್ನು ಸಾಕಷ್ಟು ಅಭ್ಯಾಸಮಾಡದೆ ಮತ್ತು ವಿಚಾರಗಳನ್ನು ಸಾಕಷ್ಟು ಗ್ರಹಿಸದೆ ಆಡಿರತಕ್ಕಮಾತು ಎಂದು

ಹೇಳಿದರೆ ಸಾಕು. ಮಾನ್ಯ ಸದಸ್ಯರಾದಂಥ ಶ್ರೀಮಾನ್ ಪುಟ್ಟಣ್ಣನವರು ಈ ದಿವಸವೇನೋ ಹಾಜರಾಗಿಲ್ಲ. ಇದ್ದಿದ್ದರೆ ಚೆನ್ನಾಗಿತ್ತು.

Sri C. M. ARUMUGHAM.—Does n't matter. We represent him.

ಶ್ರೀ ಮಾಲ ಮರಿಯಪ್ಪ.—ಶ್ರೀಮಾನ್ ಪುಟ್ಟಣ್ಣನವರು ಅನೇಕ ವೇಳೆ ಕೆಲವು ಅಂಕ ಅಂಶಗಳನ್ನು ಹೇಳುತ್ತಾರೆ. ಆ ರೀತಿ ಹೇಳತಕ್ಕದ್ದು ಅಷ್ಟೇ ಅಲ್ಲದೆ ಅದು ಸರಿಯಲ್ಲವೆಂದು ಹೇಳಿ ನಾನು ಇದನ್ನು ರುಜುವಾತು ಮಾಡುತ್ತೇನೆಂದು ಹೇಳುತ್ತಾರೆ. ಆದರೆ ಆ ಅಂಕಿಅಂಶ ಇವರಿಗೆ ಹೇಗೆ ದೊರೆಯಿತು? ಯಾವ್ಯಾದರಿಂದ ಅದನ್ನು ಕೊ ರ್ಚ್ ಮಾಡುತ್ತಾರೆಂದು ಒಂದೆರಡು ಬಾರಿ ನಾನು ಪರೀಕ್ಷೆ ಮಾಡಿದಾಗ ಅವರು ಯಾವುದೋ ಒಂದು ಹೇಳಿ ರಿಪೋರ್ಟ್ ಅಂದರೆ ನೌರೈದು ವರ್ಷಗಳ ಹಿಂದೆ ಇದ್ದಂತಹ ಅಂಕಿಅಂಶಗಳನ್ನು ಶೇಖರಣೆಮಾಡಿ ಅದೇ ಅಂಕ ಅಂಶ ಇವತ್ತಿಗೂ ಸರಿ ಎಂದು ಹೇಳುತ್ತಾರೆ. ಆದರೆ ಅವರು ಬಹುಶಃ ಹೇಳುತ್ತಿದ್ದುದು ತುಮಕೂರು ಜಿಲ್ಲೆಗೆ ಸಂಬಂಧಪಟ್ಟ ಕೆಲವು ಸೊಸೈಟಿಗಳ ವಿಚಾರವೆಂದು ಕಾಣುತ್ತದೆ. ಆ ವಿಷಯದಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆಂದು ನನಗೆ ಕಾಣುತ್ತದೆ. ನಾನು ಹೇಳುವುದಾದರೆ ಸಾಮಾನ್ಯವಾಗಿ ಕಾನೂನು ಪ್ರಕಾರ ಪ್ರತಿಯೊಂದು ಸೊಸೈಟಿಯೂ ಸಪ್ಟೆಂಬರ್ ಅಖೈರಿಗೆ ಅದರ ವರ್ಷ ಪೂರೈಸುತ್ತದೆ. ಅದರ ಲೆಖ್ಖಪತ್ರಗಳನ್ನು ಆಡಿಟ್ ಮಾಡಿಸುವುದಕ್ಕೆ ಸೆಪ್ಟೆಂಬರ್ ಅಖೈರಿ ನೊಳಗೆ ಮಾಡಿ ಜನರಲ್ ಬಾಡಿ ಮೀಟಿಂಗನ್ನು ಸೆಪ್ಟೆಂಬರ್ ಅಖೈರಿನೊಳಗೆ ಪೂರೈಸಬೇಕೆಂದು ಕಡ್ಡಾಯವಾದ ನಿಯಮವಿದೆ. ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಮೇಲೆ ಈಗ ಒಂದು ವರ್ಷದ ಕೆಳಗೆ ಈ ಆಕ್ಟ್ ಜಾರಿಗೆ ಬಂತು. ಆದಾಗಿಯೂ ಇದಕ್ಕೆ ಸಂಬಂಧಪಟ್ಟ ಕಾನೂನು ಗಳೆಲ್ಲಾ ಜಾರಿಗೆ ಬರುತ್ತಿವೆ. ಆದರೆ ಕೆಲವು ಸೊಸೈಟಿಗಳಲ್ಲಿ ವಾಯಿದೆಯೊಳಗೆ ಜನರಲ್ ಬಾಡಿ ಮೀಟಿಂಗ್ ಆಗುವುದಿಲ್ಲ. ಅಂತಹ ಸಂದರ್ಭದಲ್ಲಿ ಆ ಸೊಸೈಟಿಗಳು ವಾಯಿದೆ ಬಡಾವಣೆ ಯನ್ನು ಕೇಳಲೇಬೇಕು. ಅದನ್ನು ರಿಜಿಸ್ಟ್ರಾರ್ ಅವರಿಂದ ತೆಗೆದುಕೊಳ್ಳಬೇಕು. ಆಗ ಆ ವಾಯಿದೆಯೊಳಗೆ ಹೇಗಾದರೂ ಜನರಲ್ ಬಾಡಿ ಮೀಟಿಂಗ್ ಮಾಡಲೇಬೇಕಾಗುತ್ತದೆ. ಕೆಲವು ಸೊಸೈಟಿಗಳಲ್ಲಿ ಅಂದರೆ ಶೇ. 5 ಅಥವಾ 6 ಸೊಸೈಟಿಗಳಲ್ಲಿ ಈ ರೀತಿ ಆಗಬಹುದು. ಹೆಚ್ಚಿಗೆ ಆಗುವುದಿಲ್ಲ. ಸಾಮಾನ್ಯವಾಗಿ ವಾಯಿದೆ ಕೇಳಿದರೆ ಹೋದ ವರ್ಷ ಲೆಖ್ಖತೆಗೆದು ಕೊಂಡರೆ, ಬಹಳ ಅತ್ಯಲ್ಪವಾಗಿದೆ. ಅಂದಮೇಲೆ ಎಲ್ಲಾ ಸೊಸೈಟಿಗಳಲ್ಲೂ ಜನರಲ್ ಬಾಡಿ ಮೀಟಿಂಗ್ ಆಗಿಲ್ಲವೆಂದು ಹೇಳತಕ್ಕದ್ದು ತಪ್ಪಾಗಿ ಸ್ಟೇಟಿಂಗ್ ರಿಮಾರ್ಕ್ಸ್ ಎಂದು ನಾನು ಹೇಳುತ್ತೇನೆ. ಅವರು ಭಾಷಣ ಮಾಡುವಾಗ ಕರಾರುವಾಕ್ಕಾದ ಅಂಕಿಅಂಶಗಳನ್ನು ಪಡೆಯಲು ಸ್ವಲ್ಪಮಟ್ಟಿನ ಆಸಕ್ತಿ, ಶ್ರದ್ಧೆ ತೋರಿಸಿದ್ದರೆ ನಿಜವಾದ ಅಂಕಿಅಂಶ ಸಿಕ್ಕುವುದಕ್ಕೆ ಕಷ್ಟವಾಗುತ್ತಿರಲಿಲ್ಲ. ಅದೂ ಅಲ್ಲದೆ ಈ ಸಭೆಯಲ್ಲಿ ಯಾವುದೇ ಅಂಕಿಅಂಶಗಳನ್ನು ಕೊಡುವಾಗ ನಷ್ಟವಾವ, ಮತ್ತು ಕರಾರುವಾಕ್ಕಾದ ಅಂಕಿ ಅಂಶಗಳನ್ನು ತಿಳಿದುಕೊಂಡು ಹೇಳುವುದು ಬಹಳ ಒಳ್ಳೆಯದು. ಹಾಗೇ ಹೇಳುವುದರ ಜೊತೆಗೆ ತುಮಕೂರು ಜಿಲ್ಲೆ ಮತ್ತು ಕೋಲಾರ ಜಿಲ್ಲೆಯಲ್ಲಿರತಕ್ಕ ಸಹಕಾರ ಸಂಘಗಳ ಕಾರ್ಯ ಸಮರ್ಪಕವಾಗಿ ನಡೆಯುತ್ತಿಲ್ಲ. ಕೋ-ಆಪರೇಟಿವ್ ಡಿಪಾರ್ಟ್‌ಮೆಂಟಿನ ಆಫೀಸರು ಹೊಂದಿರತಕ್ಕ ಜವಾಬ್ದಾರಿ ಎಷ್ಟೆಂಬುದನ್ನು ಸ್ವಲ್ಪಮಟ್ಟಿಗೆ ವಿಚಾರ ಮಾಡಿ ನೋಡಬೇಕು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ನನ್ನ ಸ್ನೇಹಿತರು ಹೇಳಿದ ಅಂಕಿಅಂಶ ನಿಜವಲ್ಲವೆಂದು ಹೇಳುತ್ತಿದ್ದಿರಿ. ಒಂದು ವೇಳೆ ನೀವು ಹೇಳುವುದು ಕರಾರುವಾಕ್ಕಾಗಿ ಇಲ್ಲವೆ ಹೋದರೆ...

ಶ್ರೀ ಮಾಲ ಮರಿಯಪ್ಪ.—ನೀವು ಮನಸ್ಸಿಗೆ ಬಂದಹಾಗೆ ಹೇಳಬಹುದು. ನಮ್ಮ ಅಂಕಿ ಅಂಶಗಳು ಯಾವಾಗಲೂ ಕರಾರುವಾಕ್ಕಾದ ಅಂಶಗಳು ಎಂಬುದನ್ನು ಮಾನ್ಯ ಸದಸ್ಯರು ನೆನಪಿನಲ್ಲಿಟ್ಟುಕೊಳ್ಳಬೇಕು. ಕೋ-ಆಪರೇಟಿವ್ ಡಿಪಾರ್ಟ್‌ಮೆಂಟಿನಲ್ಲಿ ಕೆಲಸಮಾಡುವ ಆಫೀಸರ್ಸ್ ಜವಾಬ್ದಾರಿ ಬಹಳವಾಗಿ ಇರುತ್ತೆ. ಸೊಸೈಟಿಗಳ ಮೇಲೆ ಸಾಮಾನ್ಯವಾಗಿ ಪೀಲ್ಡ್‌ವರ್ಕ್ ಮಾಡುವ ಮತ್ತು ಆಡಿಟ್ ಕ್ರಮವಾಗಿ ನಡೆಯತಕ್ಕ ಭಾಗ ಮತ್ತು ಆಡಿಟರ

(ಶ್ರೀ ಮಾಲ ಮರಿಯಪ್ಪ)

ಪ್ರಗತಿ ಜವಾಬ್ದಾರಿ ಸಾರ್ವಜನಿಕರ ಮೇಲೂ ಇರುತ್ತದೆ. ಷೇರ್ ಹೋಲ್ಡರ್‌ಗಳಿಂದ ಚುನಾಯಿತರಾದಂತಹ ಪ್ರತಿನಿಧಿಗಳ ಮೇಲೂ ಇರುತ್ತದೆ. ಅಂದಮೇಲೆ ಏನಾದರೂ ಒಂದು ವೇಳೆ ಕೆಲವು ಅಂಶಗಳು ಸೊಸೈಟಿಗಳಲ್ಲಿ ಅಪ್ಪ ತಪ್ಪಿ ವ್ಯತ್ಯಾಸ ನಡೆದರೆ ಶೇ 90 ರಷ್ಟು ಜವಾಬ್ದಾರಿಯನ್ನು ಮ್ಯಾನೇಜ್‌ಮೆಂಟನವರು ತೆಗೆದುಕೊಳ್ಳುತ್ತಾರೆ. ಕೆಲವು ಕಡೆಯಲ್ಲಿ ರತಕ್ಕ ಸೊಸೈಟಿಗಳು ತಮ್ಮ ವಶಕ್ಕೆ ವಹಿಸಿರತಕ್ಕ ಕೆಲಸಕಾರ್ಯಗಳನ್ನು ಬಹಳ ಸಮರ್ಪಕವಾಗಿ, ಬಹಳ ತೃಪ್ತಿಕರವಾಗಿ ಮತ್ತು ಷೇರು ಹೋಲ್ಡರುಗಳಿಗೆ ಸಮಾಧಾನಕರವಾಗಿಯೂ ಮಾಡುವ ಕಾರಣವೇನು ? ಇನ್ನು ಕೆಲವು ಸೊಸೈಟಿಗಳಲ್ಲಿ ಮಾನ್ಯ ಸದಸ್ಯರು ಹೇಳಿರತಕ್ಕ ಒಂದೆರಡು ಆಕ್ಷೇಪಣೆಗಳಿರುವುದಕ್ಕೆ ಕಾರಣವೇನೆಂಬುದನ್ನು ಹೋಲಿಸಿ ನೋಡುವುದಾದರೆ, ಸಾರ್ವಜನಿಕರಿಂದ ಚುನಾಯಿತರಾಗಿ ಬಂದಂತಹ ಮ್ಯಾನೇಜ್‌ಮೆಂಟನವರು ಚೆನ್ನಾಗಿ ಕೆಲಸ ಮಾಡುವ ಸೊಸೈಟಿಗಳಷ್ಟು ಆಸಕ್ತಿ, ಶ್ರದ್ಧೆ ಮತ್ತು ಜವಾಬ್ದಾರಿಯನ್ನು ವಹಿಸಿಲ್ಲವೆಂದು ಹೇಳುವುದು ನ್ಯಾಯೋಚಿತವಾಗಿದೆ. ಈ ಅಂಶವನ್ನು ಮನಸ್ಸಿಗೆ ತೆಗೆದುಕೊಂಡು ಸಾರ್ವಜನಿಕರು ಇನ್ನೂ ಹೆಚ್ಚಿನ ಶ್ರದ್ಧೆ, ಆಸಕ್ತಿಯಿಂದ ತಮ್ಮ ಸಹಕಾರವನ್ನು ಕೊಟ್ಟರೆ ಖಂಡಿತವಾಗಿ ಸೊಸೈಟಿಗಳ ಅಭಿವೃದ್ಧಿ ಮತ್ತಷ್ಟು ಉತ್ತಮಗೊಳ್ಳುತ್ತದೆ, ಆ ರೀತಿ ಜವಾಬ್ದಾರಿಯನ್ನು ಅವರು ವಹಿಸಿದರೆ ಯಾವ ರೀತಿಯಾದಂತಹ ವ್ಯತ್ಯಾಸವೂ ಸೊಸೈಟಿಗಳಲ್ಲಿ ನಡೆಯುವುದಕ್ಕೆ ಕಾರಣವಿರುವುದಿಲ್ಲ. ಇನ್ನು ಅಲ್ಲಿನ ಆಫೀಸರುಗಳು ಬಹಳವಾಗಿ ಪ್ರಾಮಾಣಿಕರಾಗಬೇಕು ಎಂದು ಕೆಲವರು ಹೇಳಿದರು. ಆ ಬಗ್ಗೆ ಕಾನೂನಿನಲ್ಲಿ ಅವಕಾಶವಿಲ್ಲ. ಏಕೆಂದರೆ ಸಾರ್ವಜನಿಕರೇ ಈ ಸೊಸೈಟಿಗಳಲ್ಲಿ ಕೆಲಸಮಾಡುವ ಪ್ರತಿನಿಧಿಗಳು ಆಗಿದ್ದಾರೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ತಮ್ಮ ಇಲಾಖೆಯ ಮುಖ್ಯಾಧಿಕಾರಿಯೊಬ್ಬರು ಚುನಾವಣೆಯಲ್ಲಿ ನಿಂತಾಗ, ಇವರು ಯೋಗ್ಯರಲ್ಲ. ಇವರನ್ನು ಆರಿಸಬಾರದು ಎಂದು ಚುನಾವಣೆಗೆ ನಂಬಂಧಪಟ್ಟವರು ಹೇಳಿ ಅವರು ಚುನಾವಣೆಯಲ್ಲಿ ಸೋತು ಹೋದಮೇಲೂ ಅಂತಹವರನ್ನೇ ಆ ಸೊಸೈಟಿಗೆ ಆ ವರ್ಷವೇ ನಾಮಕರಣಮಾಡುವ ಪದ್ಧತಿ ಸರಿಯೆಂದು ತಾವು ಒಪ್ಪುತ್ತೀರಾ?

ಶ್ರೀ ಮಾಲ ಮರಿಯಪ್ಪ.—ಯಾವುದಾದರೂ ಒಂದು ಉದಾಹರಣೆಯನ್ನು ಹೇಳಿದರೆ ಅದರ ಪೂರ್ವೋತ್ತರ ಚರಿತ್ರೆಯನ್ನು ತಿಳಿದುಕೊಂಡು ಉತ್ತರ ಹೇಳುತ್ತೇನೆ. ನನಗೆ ಆ ಡೀಟೇಲ್ಸ್‌ಕೊಡಿ, ನಂತರ ಹೇಳಬಹುದು.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಚುನಾವಣೆಯಲ್ಲಿ ಸೋತುಹೋದವರನ್ನು ನಾಮಕರಣ ಮಾಡುತ್ತಿದ್ದರಲ್ಲಾ, ಅದು ಸರಿಯೇ ?

ಶ್ರೀ ಮಾಲ ಮರಿಯಪ್ಪ.—ನನಗೆ ಸ್ಪೆಸಿಫಿಕ್ಕಾಗಿ ಒಂದು ಉದಾಹರಣೆಯನ್ನು ಕೊಟ್ಟರೆ ಉತ್ತರ ಹೇಳುತ್ತೇನೆ. ಒಟ್ಟಿನಲ್ಲಿ ಈ ಬಗ್ಗೆ ಸಾರ್ವಜನಿಕರ ಜವಾಬ್ದಾರಿಯೂ ಸಾಕಷ್ಟು ಇರುತ್ತದೆ ಎಂಬ ಅಂಶವನ್ನು ಈ ಸಂದರ್ಭದಲ್ಲಿ ಒತ್ತಾಯಮಾಡಿದರೆ ಸಾಕು ಎಂದು ನನಗನ್ನಿಸುತ್ತದೆ. ಈ ಬಗ್ಗೆ ಸಾರ್ವಜನಿಕರ ಹೆಚ್ಚಿನ ಶ್ರದ್ಧೆ, ನಿಜವಾದ ಸೇವೆ ಮತ್ತು ವಿಶೇಷ ಸಹಕಾರ ಅಗತ್ಯವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. CHAIRMAN.—The House will now rise and meet to-morrow at 1-00 P.M.

The House adjourned at Six of the Clock to meet again at One of the Clock on Wednesday, the 29th March 1961.

WD 6402—GPB—(L.A. New Br.)—500—6-1-67.